ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸುವ ಸಂಶೋಧನಾ ಪ್ರಬಂಧದ ಅಂತಿಮ ಸಾರಲೇಖ

ಸಂಶೋಧನಾ ವಿಷಯ:

“ವಸಾಹತುಶಾಹಿ ಕರಾವಳಿ ಕರ್ನಾಟಕದ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗಳ ಅಧ್ಯಯನ”

ಸಂಶೋಧನಾ ವಿದ್ಯಾರ್ಥಿ:

ಪ್ರಮೀಳಾ ಎಂ.

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – 574 199

ಸಂಶೋಧನಾ ಮಾರ್ಗದರ್ಶಕರು:

ಡಾ. ಮೀನಾಕ್ಷಿ ಎಂ. ಎಂ.

ಸಹ ಪ್ರಾಧ್ಯಾಪಕರು (ನಿವೃತ್ತ)

ವಿಶ್ವವಿದ್ಯಾನಿಲಯ ಕಾಲೇಜು

ಹಂಪನಕಟ್ಟೆ, ಮಂಗಳೂರು,

ಇತಿಹಾಸ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ

ಮಂಗಳೂರು – 574 199

ಇಂದ,

ಪ್ರಮೀಳಾ ಎಂ.

ಸಂಶೋಧನಾ ವಿದ್ಯಾರ್ಥಿ

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – 574 199

ಇವರಿಗೆ,

ಕುಲಸಚಿವರು (ಪರೀಕ್ಷಾಂಗ)

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – 574 199

ಮೂಲಕ,

ಡಾ. ಮೀನಾಕ್ಷಿ ಎಂ. ಎಂ.

ಸಹ ಪ್ರಾಧ್ಯಾಪಕರು (ನಿವೃತ್ತ)

ವಿಶ್ವವಿದ್ಯಾನಿಲಯ ಕಾಲೇಜು

ಹಂಪನಕಟ್ಟೆ, ಮಂಗಳೂರು,

ಮಾನ್ಯರೇ,

ವಿಷಯ : **ಸಂಶೋಧನಾ ಅಧ್ಯಯನದ ಅಂತಿಮ ಸಾರಲೇಖವನ್ನು ಸಲ್ಲಿಸುವುದರ ಕುರಿತು.**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಇತಿಹಾಸ ಅಧ್ಯಯನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆಯಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ಮೀನಾಕ್ಷಿ ಎಂ. ಎಂ. (ನಿವೃತ್ತ) ಇವರ ಮಾರ್ಗದರ್ಶನದಲ್ಲಿ "ವಸಾಹತುಶಾಹಿ ಕರಾವಳಿ ಕರ್ನಾಟಕದ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗಳ ಅಧ್ಯಯನ" ಎಂಬ ವಿಷಯದ ಕುರಿತು ನಾನು ಅರೆಕಾಲಿಕ ಸಂಶೋಧನಾ ವಿದ್ಯಾರ್ಥಿಯಾಗಿ ಪಿ. ಹೆಚ್. ಡಿ. ಸಂಶೋಧನಾ ಅಧ್ಯಯನವನ್ನು ಕೈಗೊಂಡಿರುತ್ತೇನೆ. ಈ ಸಂಬಂಧಿಸಿದ ಸಂಶೋಧನಾ ಅಧ್ಯಯನದ ಅಂತಿಮ ಸಾರಲೇಖವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ಇತೀ ತಮ್ಮ ಸಂಶೋಧನಾ ವಿದ್ಯಾರ್ಥಿ,

ದಿನಾಂಕ:
ಸ್ಥಳ : ಮಂಗಳಗಂಗೋತ್ರಿ

ಸಹಪ್ರಾಧ್ಯಾಪಕರು (ನಿವೃತ್ತ)
ವಿಶ್ವವಿದ್ಯಾನಿಲಯ ಕಾಲೇಜು
ಹಂಪನಕಟ್ಟೆ, ಮಂಗಳೂರು,

(ಪ್ರಮೀಳಾ ಎಂ.)

ಪೀಠಿಕೆ

ಇತಿಹಾಸವು ನಿರಂತರವಾಗಿ ಪುನರ್‌ವ್ಯಾಖ್ಯಾನ, ಪುನರ್‌ನಿರ್ಮಾಣ, ಪುನರ್‌ಪರಿಶೀಲನೆ, ವಿಶ್ಲೇಷನೇ ಮತ್ತು ಅರ್ಥೈಸುವಿಕೆಗಳಿಗೆ ಒಳಪಟ್ಟು ಪುನರ್‌ರಚನೆಗೊಂಡು ಮತ್ತೆ ಹೊಸ ಅಧ್ಯಯನಕ್ಕೆ ಒಳಪಡುವುದನ್ನು ನಾವು ಕಾಣುತ್ತೇವೆ.

“ಪಡುವಣ ಕಡಲಿನ ತೆಂಗಿನ ಮಡಿಲಿನ ಮರೆಯಲಿ ಮೆರೆವುದು ನಾಡೊಂದು. ಸೃಷ್ಟಿಯ ಮಾತೆಯು ಮೀನಿನ ಸೊಬಗಿನ ಹೊದಿಕೆಯ ಹೊದ್ದಿಹ ಬೀಡೊಂದು” ಎಂದು ಕರ್ನಾಟಕದ ಕರಾವಳಿಯನ್ನು ವರ್ಣಿಸಿದ್ದಾರೆ. ಕವಿ ಕಡೆಂಗೋಡ್ಲು ಶಂಕರ್ ಭಟ್ ಅವರು. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಾಗಿ ವಿಭಜನೆಗೊಂಡಿತು. ಇದು ಭೌಗೋಳಿಕ ವಿಭಜನೆಯಾಗಿದ್ದು ಭಾವನಾತ್ಮಕವಾಗಿ ಉಭಯ ಜಿಲ್ಲೆಯವರು ಒಂದೇ ಆಗಿದ್ದಾರೆ.

ಇಲ್ಲಿ ಮಾನವನು ಮೊದಲಾಗಿ ಕಾಣಿಸಿಕೊಂಡಿದ್ದು ಯಾವಾಗ ಎಂಬ ಪ್ರಶ್ನೆಗೆ ಇತಿಹಾಸಕಾರರು ಕುತೂಹಲಕಾರ ಉತ್ತರ ನೀಡುತ್ತಾರೆ. ಪ್ರಾಚೀನ ಕಾಲದಲ್ಲಿ ಪಶ್ಚಿಮ ಘಟ್ಟದ ಉದ್ದಕ್ಕೂ ಕರಾವಳಿಯ ಪ್ರದೇಶದಲ್ಲಿ ಗಾಢವಾದ ಮತ್ತು ಅಪಾಯಕಾರಿಯಾದ ಕಾಡುಗಳಿದ್ದವು. ಘಟ್ಟವನ್ನು ದಾಟಿ ಕರಾವಳಿಯ ಪ್ರದೇಶದಲ್ಲಿ ನೆಲೆಸಿ ಅಲ್ಲಿ ಸಾಗುವಳಿಯ ಕಾರ್ಯ ಪ್ರಾರಂಭಿಸುವ ಸಲುವಾಗಿ ಪುರಾತನ ಮಾನವನು ಇಲ್ಲಿ ಕಾಡುಗಳನ್ನು ಅಳಿಸುವುದು ಅನಿವಾರ್ಯವಾಯಿತು. ಈ ಮಹತ್ಸಾಧನೆಯು ಕಬ್ಬಿಣದ ಕೊಡಲಿಯ ಸಹಾಯವಿಲ್ಲದ ಮಾನವರಿಂದ ಅಸಾಧ್ಯ ಎಂದು ಖ್ಯಾತ ಪುರಾತತ್ವ ಸಂಶೋಧಕ ರಾಬರ್ಟ್ ಬ್ರೂಸ್‌ಫೂಟ್‌ನ ಸಿದ್ಧಾಂತ. ಅಂದ ಮೇಲೆ ತುಳುನಾಡಿನ ಆದಿಮಾನವನು ಲೋಹಯುಗದವನೆಂದು ಊಹಿಸಲಾಗಿದೆ. ಈ ಸಂದರ್ಭದಲ್ಲಿ ಪ್ರಾಚೀನ ಕಾಲದಿಂದಲೂ ಪಶ್ಚಿಮ ಕರಾವಳಿಯ ಪ್ರದೇಶಕ್ಕೆ ಪರಶುರಾಮ ಕ್ಷೇತ್ರವೆಂಬ ಹೆಸರು ಇದೆ ಅನ್ನುವುದು ಉಲ್ಲೇಖನೀಯ. ಪರಶುರಾಮನು ಈ ಲೋಹಯುಗದ ಕಾಡುಗಲಿಗಳ ನೆನಪಿನಿಂದ ಹುಟ್ಟಿದ ಪುರಾಣ ಪುರುಷನಿರಬಾರದೇಕೆ? ಇದು ಸರಿಯೆಂದಾದಲ್ಲಿ ತುಳುನಾಡಿನಲ್ಲಿ ಮಾನವನ ಇತಿಹಾಸವು ಸುಮಾರು ಮೂರು ಸಾವಿರ ವರುಷಗಳ ಹಿಂದೆ ಪ್ರಾರಂಭವಾಯಿತೆಂದು ಹೇಳಬಹುದು.

ಕ್ರಿ.ಪೂ.2730ರಿಂದ ಆಳಿದ ಮೌರ್ಯ ಚಕ್ರವರ್ತಿ ಅಶೋಕನ ಎರಡನೆಯ ಶಿಲಾಲಿಪಿಗಳಲ್ಲಿ ಚೋಡಾ (ಚೋಳಾ) ಪಾಡಿಯಾ(ಪಾಂಡ್ಯ), ಕೇರಲಪುತ್ರ, ತಾಂಬ್ರ ಪರ್ಣಿ ಮತ್ತು ಸತಿಯ ಪುತ್ರ ಎಂಬೀ ರಾಜ್ಯಗಳಲ್ಲಿ ಅವನ ಸಾಮ್ರಾಜ್ಯದ ನೆರೆಯ ರಾಜ್ಯಗಳೆಂದು ಕರೆಯಲಾಗುತ್ತದೆ. ಈ ರಾಜ್ಯಗಳಲ್ಲಿ ಚೋಳ ಮತ್ತು ಪಾಂಡ್ಯ ರಾಷ್ಟ್ರಗಳು ಇಂದಿನ ತಮಿಳುನಾಡಿಗೆ ಸರಿ ಹೊಂದುತ್ತವೆ. ಕೇರಲ ಪುತ್ರವು ಕೇರಳ ಪ್ರದೇಶ, ಪರ್ಣಿ ಇಂದಿನ ಶ್ರೀಲಂಕಾ ರಾಷ್ಟ್ರ. ಆದರೆ, ಅಂದಿನ ಸತಿಯ ಪುತ್ರವು ಇಂದಿನ ಭಾರತದ ಯಾವ ಪ್ರದೇಶದ ಹೆಸರಿತ್ತೆಂಬ ಬಗ್ಗೆ ವಿದ್ವಾಂಸರಲ್ಲಿ ಒಮ್ಮತ ಮೂಡಿಲ್ಲ. ಅಶೋಕನ ಸಾಮ್ರಾಜ್ಯದ ಹೊರಗಿದ್ದ ದಕ್ಷಿಣ ಭಾರತದ ಉಳಿದೊಂದು ಪ್ರದೇಶ ತುಳುನಾಡು.

ತುಳುಭಾಷೆಯ ಬಳಕೆಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯ ಅಶೋಕನ ಕಾಲದ ಸತಿಯ ಪುತ್ರ ಎಂದು ಹಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಕೇರಳದ ಉತ್ತರಕ್ಕಿದ್ದ ಇಡಿಯ ಪಶ್ಚಿಮ ಸಹ್ಯಾದ್ರಿಯೆಂಬ ಹೆಸರು ಅನ್ವಯಿಸುವುದಾದರೂ ಅದು ತುಳುನಾಡಿನ ಪೂರ್ವಕ್ಕಿದ್ದ ಘಟ್ಟಕ್ಕೆ ವಿಶೇಷವಾಗಿ ಬಳಕೆಯಾಗುತ್ತಿತ್ತೆಂಬುದಕ್ಕೆ ಸಹ್ಯಾದ್ರಿ ಖಂಡವು ಒಂದು ನಿದರ್ಶನ. ಹೀಗಾಗಿ ಅಶೋಕನ ಕಾಲದ ಸತಿಯ ಪುತ್ರವು ಸಂಸ್ಕೃತದ 'ಸಹ್ಯಪುತ್ರ'ದ ಪ್ರಾಕೃತರೂಪವಿರಬಾರದೇಕೆ? ಎಂದು ವಿಶ್ಲೇಷಿಸಿದ್ದಾರೆ. ಪ್ರಖ್ಯಾತ ಇತಿಹಾಸ ತಜ್ಞ ಡಾ. ಕೆ. ವಿ. ರಮೇಶರವರು.[1]

ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಮಾತ್ರವಲ್ಲ ರಾಜಕೀಯ ನೆಲೆಯಲ್ಲೂ ಅನನ್ಯತೆಯನ್ನು ಹೊಂದಿರುವ ತುಳುನಾಡು. ಮಾತೃವಂಶೀಯ ಸಂಸ್ಕೃತಿಯನ್ನು ಹೊಂದಿರುವ ಈ ಸಮಾಜ ಮಹಿಳೆಗೆ ರಕ್ಷಣೆ ಕೊಟ್ಟಿದೆ. ಆದರೆ ರಾಜಕೀಯವಾಗಿ ಆಕೆಗೆ ಸ್ವಾತಂತ್ರ್ಯ ನೀಡುವುದಿಲ್ಲ. ತುಳುನಾಡಿನ ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಮಹಿಳೆ ರಾಜಕೀಯಾತ್ಮಕ ಚಟುವಟಿಕೆಗಳಲ್ಲಿ ಶೂನ್ಯಳಾಗಿದ್ದಾಳೆ. ಸಣ್ಣಪುಟ್ಟ ಗ್ರಾಮ ಪಂಚಾಯತಿಯಂತಹ ಸಭೆಗಳಲ್ಲಿ ಕೂಡ ನಿಷೇಧವಿತ್ತು. ತುಳುನಾಡ ಸಿರಿಪಾಡ್ದನದಲ್ಲಿ ಹೆಣ್ಣಿಗೆ ಪಟ್ಟವೇ? ಎಂದು ಕೇಳಿದ ಪ್ರಸಂಗ ಇದೆ. ಆದರೆ ತುಳುನಾಡಿನ ಇತಿಹಾಸದಲ್ಲಿ ಮಹಿಳೆ ಒಡ್ಡೋಲಗಗೊಟ್ಟು ರಾಜ್ಯಭಾರ ಮಾಡಿದ ಮಾಹಿತಿಗಳು ದೊರಕುತ್ತವೆ.

ಬಾರಕೂರಿನ ಪಟ್ಟದ ಪಿರಿಯರಸಿ ಬಲ್ಲ ಮಹಾದೇವಿ (ಬಾರಕೂರು ಸೀಮೆಯ ಪಟ್ಟದ ರಾಣಿ) "ಸಮಸ್ತ ಪ್ರಧಾನರಂ ದೇಸೀ ಪುರುಷರು ಬಾಹತ್ತರ ನಿಯೋಗಿಗಳು ಉಪಸ್ಥಿತರಿದ್ದ ಬಾರಹ ಕನ್ಯಾಪುರದ ಅರಮನೆಯಲು ಸ್ಥಿರ ಸಿಂಹಾಸನಾ ರೂಢರಾಗಿ ವಡ್ಡೋಲ ಗಂಗೊಟ್ಟಿರುವ" ಬಗ್ಗೆ ಶಾಸನದಲ್ಲಿ ಉಲ್ಲೇಖಿತವಾಗಿದೆ. ಆದರೆ ವಾಸ್ತವದಲ್ಲಿ ತುಳುನಾಡಿನ ಮಹಿಳೆಯರಿಗೆ ವಿಧಿವತ್ತಾಗಿ ಪಟ್ಟಾಭಿಷೇಕ ಆಗಿದೆ ಎನ್ನುವುದನ್ನು ಜನತೆ ಒಪ್ಪುವುದಿಲ್ಲ.

ಆಧುನಿಕ ಇತಿಹಾಸಕಾರರ ಪ್ರಕಾರ ಮಹಿಳೆಯರಿಗೆ ರಾಜ್ಯಸಭೆಗಳಗೆ ಪ್ರವೇಶವೇ ಇರಲಿಲ್ಲ ಆದುದರಿಂದ ಆಕೆಗೆ ವಿಧಿವತ್ತಾಗಿ ಪಟ್ಟ ಆಗಿರುವ ಬಗ್ಗೆ ಸಂದೇಹ ಇದೆ. ಪಟ್ಟ ಆಗಿರುವುದು ಅಸಂಭವ ಇದೆ. ಪುರುಷ ಬಲ ಇಲ್ಲದ ಕಡೆ ಇರುವ ಮಿತಿಯಲ್ಲಿಯೇ ಮಹಿಳೆ ಆಳ್ವಿಕೆ ನಡೆಸಿದ ಉದಾಹರಣೆ ಇದೆ. ಆದರೆ ಆಕೆಗೆ ಪಟ್ಟಾಭಿಷೇಕ ಆಗುವುದಿಲ್ಲ, ಮಹಿಳೆಗೆ ಪಟ್ಟ ಆಗುವ ರೂಢಿ ಇಲ್ಲ, ತುಳು ಸಂಪ್ರದಾಯದಲ್ಲಿ ಮಹಿಳೆಗೆ ಪಟ್ಟ ಇಲ್ಲ. ಬಲ್ಲಾಳ ಮನೆತನಗಳಲ್ಲಿ ಪಟ್ಟ ಆಗುವಾಗ ಸ್ತ್ರೀ ಪುರುಷರಿಬ್ಬರಿಗೂ ಪಟ್ಟ ಆಗುವ ಸಂಪ್ರದಾಯ ರೂಢಿಯಲ್ಲಿತ್ತು. ಆದರೆ ಭಾವ, ಬಾಳಿಕೆ, ಐರಾಡಿ ಮುಂತಾದ ಮನೆಗಳ 'ಗಡಿ' ಮಹಿಳೆಯರಿಗೆ ಆಗುವಂತಿರಲಿಲ್ಲ.

ರಾಜ್ಯ ಅಥವಾ ಸಮಸ್ತ ಆಸ್ತಿ ಯಾರ ಹೆಸರಲ್ಲಿ ಇರುವುದೋ ಆ ಮಹಿಳೆಯನ್ನು ಪಟ್ಟದ ಪಿರಿಯರಸಿ,ಪಿ/ಹೆರಿಯಪ್ಪೆ, ಪಟ್ಟದಬ್ಬೆ, ಪಡದಾರ್ತಿ, ಕಡ್ತಲೆದಾರ್ತಿ ಹೀಗೆ ಕರೆಯುವುದು ತುಳುನಾಡಿನ ವಾಡಿಕೆ. ಈಕೆ ಪಟ್ಟದರಸನ ತಾಯಿ, ತಾಯಿ ಸಮಾನಳು, ಸೋದರಿ, ಅಥವಾ ಸೋದರಿ ಸಮಾನಳು.

ಕರಾವಳಿ ಪ್ರದೇಶದ ದೇವಾಲಯ ವಾಸ್ತು ಮತ್ತು ಶಿಲ್ಪಕಲೆಯು ಕರ್ನಾಟಕದ ಪ್ರಾಚೀನ ಶ್ರೀಮಂತ ಸಂಸ್ಕೃತಿಯ ಭಾಗವಾಗಿ ಬೆಳವಣಿಗೆ ಹೊಂದಿದೆ. ಸಾಮಾನ್ಯವಾಗಿ ತುಳು ಪ್ರದೇಶವೆಂದು ಕರೆಯಲಾಗುವ ಕರಾವಳಿ ಪ್ರದೇಶವು ಇಂದಿನ ಮಂಗಳೂರು (ದ.ಕ) ಮತ್ತು ವಿಭಜಿತ ಉಡುಪಿ ಜಿಲ್ಲೆಗಳನ್ನೊಳಗೊಂಡಿದೆ. ಕಾರವಾರ ಪ್ರದೇಶವೂ ಕೂಡ ಕರಾವಳಿಯ ಪ್ರದೇಶವಾದರೂ, ಭೌಗೋಳಿಕವಾಗಿ ಕರ್ನಾಟಕದ ಪಶ್ಚಿಮ ಕರಾವಳಿಯು ಅರಬ್ಬೀಸಮುದ್ರಕ್ಕೆ ಹೊಂದಿಕೊಂಡು, ದಕ್ಷಿಣದಲ್ಲಿ ಕೇರಳ ರಾಜ್ಯ, ಉತ್ತರದಲ್ಲಿ ಕಾರವಾರ ಜಿಲ್ಲೆ ಹಾಗೂ ಗೋವಾ ರಾಜ್ಯಗಳಿಗೆ ಹೊಂದಿಕೊಂಡಿದೆ. ಇನ್ನು ಪೂರ್ವದಲ್ಲಿ ಚಿಕ್ಕಮಗಳೂರು, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳ ಗಡಿಭಾಗಗಳನ್ನು ಹೊಂದಿದೆ. ಕರಾವಳಿಯ ಉತ್ತರ ಭಾಗದಲ್ಲಿ ಘಟ್ಟ ಪ್ರದೇಶಗಳಿದ್ದು, ಎತ್ತರವಾದ ಪಶ್ಚಿಮ ಬೆಟ್ಟಗಳ ಸಾಲು, ನೂರಾರು ಕಿಲೋ ಮೀಟರುಗಳಷ್ಟು ಹರಡಿಕೊಂಡಿದೆ.

ಕರಾವಳಿ ಪ್ರದೇಶವು ಆರಂಭದಿಂದಲೂ ಬಹುಮುಖ ಸಂಸ್ಕೃತಿಯ, ಜನಾಂಗೀಯ ಮತ್ತು ಸಾಂಸ್ಕೃತಿಕ ಜೀವನ ವಿಧಾನವನ್ನು ಹೊಂದಿದೆ. ಕರಾವಳಿ ಪ್ರದೇಶವಾದುದ್ದರಿಂದ ಸಮುದ್ರವೇ ನೂರಾರು ಕುಟುಂಬಗಳಿಗೆ ಆರಂಭದಿಂದಲೂ ಜೀವನಾಧಾರವಾಗಿವೆ. ಅದು ಇಂದು ಒಂದು ಬೃಹತ್ ಉದ್ದಿಮೆಯಾಗಿ ಬೆಳೆದಿದೆ.

<u>ಭೌಗೋಳಿಕತೆ</u>

ದಕ್ಷಿಣ ಕನ್ನಡ ಎಂಬುದು ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆ. ಅದಕ್ಕೆ ತನ್ನದೇ ಆದ ಸುದೀರ್ಘ ಇತಿಹಾಸ ಮತ್ತು ಪರಂಪರೆಯಿದೆ. ಕ್ರಿ.ಶ 1860 ರಲ್ಲಿ ಇದು ಕೆನರಾ ಜಿಲ್ಲೆಯೆಂದು ಕರೆಯಲ್ಪಡುತ್ತಿತ್ತು. ಮತ್ತು ಕಾಸರಗೋಡು, ಮಂಗಳೂರು, ಬಾರಕೂರು ಮತ್ತು ಉತ್ತರ ಕೆನರಾ ಜಿಲ್ಲೆಗಳನ್ನು ಒಳಗೊಂಡಿತ್ತು. ಈ ಜಿಲ್ಲೆಯ ಭೌಗೋಳಿಕ ಸೀಮೆಗಳ ಉತ್ತರದಲ್ಲಿ ಉತ್ತರ ಕೆನರಾ ಜಿಲ್ಲೆ, ದಕ್ಷಿಣದಲ್ಲಿ ಮಲಬಾರ ಜಿಲ್ಲೆ ಮತ್ತು ಪಶ್ಚಿಮದಲ್ಲಿ ಅರಬ್ಬೀ ಸಮುದ್ರದವರೆಗೆ ವ್ಯಾಪಿಸಿಕೊಂಡಿವೆ. ಈ ಜಿಲ್ಲೆಯು 12.27 ಡಿಗ್ರಿ ಮತ್ತು 13.55 ಡಿಗ್ರಿ ಕ್ರೈಸ್ತ ಶಕೆಯ ಆರಂಭದ ಸಂಗಮ್ ಸಾಹಿತ್ಯ ಕೃತಿಯು ಈ ಭೂಪ್ರದೇಶವನ್ನು ತುಳುನಾಡು ಎಂದು ಉಲ್ಲೇಖಿಸಿದೆ. ಲಗನ್ ತನ್ನ ಮಲಬಾರ್ ಮ್ಯಾನುವೆಲ್‌ನಲ್ಲಿ ತುಳುವ ಎಂಬ ಪದವು ತುಳುಬಾನ್ ಪೆರುಮಾಳ್ ಎಂಬ ಕೇರಳದ ಒಬ್ಬ ಅರಸನಿಂದ ಬಂದಿದೆ ಎಂದೂ ದಕ್ಷಿಣ ಕೆನರಾವು ಕೇರಳದ ಒಂದು ಭಾಗವಾಗಿತ್ತೆಂದು ಬರೆದಿದ್ದಾನೆ.

ಈ ಜಿಲ್ಲೆಯು ವಿಶಾಲವಾಗಿ ಹಬ್ಬಿದ್ದು ಸುಮಾರು 250 ಕಿ.ಮೀ.ಗಳಷ್ಟು ಧೀರ್ಘವಾದ ತೀರವನ್ನು ಹೊಂದಿದೆ. ಸಾಗರ ತಟದಲ್ಲಿರುವುದರಿಂದ ಸಹಜವಾಗಿಯೇ ಸಾಗರೋದ್ಯಮಕ್ಕೆ ಹೆಚ್ಚು ಅನುಕೂಲವಾಗಿದೆ. ಪಶ್ಚಿಮ ಘಟ್ಟಗಳ ತಪ್ಪಲಿನಿಂದ ಅರಬ್ಬೀ ಸಮುದ್ರದ ನಡುವೆ ಸಪೂರವಾದ ಮತ್ತು ಉದ್ದನೆಯ ಭೂಭಾಗವನ್ನು ಇದು ಆವರಿಸಿಕೊಂಡಿದ್ದು, ಇದೊಂದು ಲೋ ಟೇಬಲ್ ಲ್ಯಾಂಡ್ ಆಗಿದೆ. ಇಡಿ ಭೂಪ್ರದೇಶವು ಹಲವಾರು ತೊರೆ ಮತ್ತು ಉಪನದಿಗಳಾಗಿ ಫಲವತ್ತಾಗಿದೆ. ಗಂಗೊಳ್ಳಿ, ಸೀತಾನದಿ, ಸುವರ್ಣ, ಶಾಂಭವಿ, ಫಾಲ್ಗುಣಿ, ನೇತ್ರಾವತಿ, ನಂದಿನಿ, ಕುಮಾರಧಾರ ಪಯಸ್ವಿನಿ (ಚಂದ್ರಗಿರಿ) ಇಲ್ಲಿನ ಪ್ರಮುಖ ನದಿಗಳಾಗಿವೆ.

ರಾಜ್ಯ ಪುನರ್ ವಿಂಗಡನೆಯ ಫಲವಾಗಿ ಕರ್ನಾಟಕ ರಾಜ್ಯಕ್ಕೆ ಸಮುದ್ರ ತೀರವು ಲಭ್ಯವಾಯಿತು. ಇದು ರಾಜ್ಯದ ಪಶ್ಚಿಮ ಭಾಗಕ್ಕಿರುವ ಅರಬ್ಬೀ ಸಮುದ್ರಕ್ಕೆ ಹೊಂದಿಕೊಂಡಿರುವ ಕಡಲ ಭಾಗವನ್ನು ಒಳಗೊಂಡಿದೆ. ಮಲೆನಾಡಿನ ಬೆಟ್ಟಗಳ ಸಾಲು ಮತ್ತು ಅರಬ್ಬೀ ಸಮುದ್ರಗಳ ನಡುವೆ ದಕ್ಷಿಣೋತ್ತರವಾಗಿ ಸುಮಾರು 350 ಕಿ.ಮೀ. ಉದ್ದದ ಕರಾವಳಿಯು ಕರ್ನಾಟಕಕ್ಕೆ ಸೇರಿರುತ್ತದೆ. ಅದು ಉತ್ತರದಲ್ಲಿ ಕೊಂಕಣ (ಗೋವಾ) ಕರಾವಳಿಯಿಂದ ದಕ್ಷಿಣದಲ್ಲಿ ಕೇರಳದ ಮಲಬಾರ್ ಕರಾವಳಿಯವರೆಗೆ ವ್ಯಾಪಿಸಿದೆ ಇದು 250 ರಿಂದ 350 ಮಿಲಿಯನ್ ವರ್ಷಗಳ ಹಿಂದೆ ಕಾರ್ಬೋನಿಫರಸ್ ಯುಗದಲ್ಲಿ ಭೂ ಸ್ಥಾನಪಲ್ಲಟ ಅಥವಾ ಶಿಲಾಸ್ಥರ ಕಾರ್ಯಚರಣೆಯಿಂದ ಸಮುದ್ರ ಭೂಭಾಗವು ಮೇಲೆತ್ತಲ್ಪಟ್ಟುದುದರ ಪರಿಣಾಮವಾಗಿ ರಚನೆಯಾಗಿದೆಂಬುದು ಭೂ ವಿಜ್ಞಾನಿಗಳ ಅಭಿಪ್ರಾಯ ಕರ್ನಾಟಕದ ಪ್ರಸ್ತುತ ಸಮುದ್ರ ತೀರವು ಬಹುತೇಕವಾಗಿ ಅತೀ ಕೊರೆತ ವೇದಿಕೆಯಂತಹ ಸ್ವರೂಪಗಳು ಅಂದರೆ ಅದು ಸವೆತ ಕಾರ್ಯದಿಂದ ರಚನೆಯಾದವು. ಕರಾವಳಿ ಪ್ರದೇಶವು ಹೆಚ್ಚು ಕಡಿದಾಗಿದ್ದು ಕಿರಿದಾಗಿರುತ್ತದೆ. ಇದಕ್ಕೆ ಪಶ್ಚಿಮ ಘಟ್ಟಗಳ ಭಾಗವಾದ ಸಹ್ಯಾದ್ರಿ ಸರಣಿಯು ಸಮುದ್ರಕ್ಕೆ ಸಮೀಪವಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣ ಸಮುದ್ರ ಮಟ್ಟದಿಂದ 200 ಕಿ.ಮೀಗಳಷ್ಟು ಎತ್ತರವಾಗಿದೆ. ಕಡಲ ತೀರದಿಂದ ಸುಮಾರು 60 ರಿಂದ 80 ಕಿ.ಮಿ.ಗಳವರೆಗೆ ಖಂಡಾವರಣ ಪ್ರದೇಶವು 180 ಮಿ.ಗಳಗಿಂತ ಹೆಚ್ಚು ಆಳವಿಲ್ಲ. ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಕರಾವಳಿಯು ಬಹು ಕಿರಿದಾಗಿದ್ದು, ಕಾರವಾರ, ಹೊನ್ನಾವರ, ಭಟ್ಕಳ, ಮುಂತಾದವುಗಳ ಕಡೆಗೆ ಹೋದಂತೆ ಸ್ವಲ್ಪ ಮಟ್ಟಿಗೆ ಅಗಲವೂ ಹೆಚ್ಚಾಗುವುದು ಅಂದರೆ 50 ರಿಂದ 60 ಕಿ.ಮೀಗಳಷ್ಟು ಅಗಲವಾಗಿರುತ್ತದೆ.

ಕರಾವಳಿ ಪ್ರದೇಶದ ಮೂಲಕ ಅನೇಕ ನದಿಗಳು ಪಶ್ಚಿಮಾಭಿಮುಖವಾಗಿ ಹರಿಯುತ್ತವೆ. ಕರಾವಳಿಯ ಉದ್ದಕ್ಕೂ ಬಂದರುಗಳ ಸೌಲಭ್ಯವಿರುವುದು ವೈಶಿಷ್ಟ್ಯ.

ಉದಾ: ಮಂಗಳೂರು, ಭಟ್ಕಳ, ಮಲ್ಪೆ, ಕಾರವಾರ, ಹೊನ್ನಾವರ, ಮುರ್ಡೇಶ್ವರ, ಮರವಂತೆ ಮೊದಲಾದವು ಇವುಗಳಲ್ಲಿ ಬಹಳಷ್ಟು ನೇರವಾದ ಸಮುದ್ರ ದಂಡೆಯುಳ್ಳವು. ಮತ್ತೆ ಕೆಲವು ಭೂಶಿಖರಗಳ ಮಧ್ಯೆ ಅರ್ಧ ಚಂದ್ರಾಕೃತಿಯುಳ್ಳವು. ಅಲ್ಲಲ್ಲಿ ಹೊರಚಾಚಿದ ಕಿರಿದಾದ ಮರಳು ದಿಬ್ಬಗಳು ಕಂಡುಬರುತ್ತದೆ.

ಸಂಸ್ಕೃತಿ ಮತ್ತು ಸಂಪ್ರದಾಯಗಳ ಆಧಾರದಲ್ಲಿ ಕರಾವಳಿ ಕರ್ನಾಟಕವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

1. ಬಾರ್ಕೂರು ಪ್ರದೇಶ
2. ಮಂಗಳೂರು ಪ್ರದೇಶ
3. ಕಾಸರಗೋಡು ಪ್ರದೇಶ

ಅಧ್ಯಯನದ ಸ್ವರೂಪ :

ಕರಾವಳಿ ಕರ್ನಾಟಕವು ಕ್ರಿ.ಶ. 1800ರಲ್ಲಿ ರಚನೆಯಾಯಿತು. ಅದರ ಹಿಂದಿನ ವರ್ಷ ನಡೆದಿದ್ದ 4ನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಮೈಸೂರಿಗೆ ಸೋಲಾಗಿ ಟಿಪ್ಪುಸುಲ್ತಾನ್ ಶ್ರೀರಂಗಪಟ್ಟಣದಲ್ಲಿ ವೀರ ಮರಣವನ್ನು ಅಪ್ಪಿದ. ಬೊಂಬಾಯಿಂದ ಕನ್ಯಾಕುಮಾರಿವರೆಗಿನ ಪಶ್ಚಿಮ ಕರಾವಳಿ ಹಾಗೂ ಕನ್ಯಾಕುಮಾರಿಯಿಂದ ಮದ್ರಾಸ್–ಕಲ್ಕತ್ತದವರೆಗಿನ ಪೂರ್ವ ಕರಾವಳಿ ಸಂಪೂರ್ಣವಾಗಿ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಪ್ರಭುತ್ವಕ್ಕೆ ಒಳಪಟ್ಟವು. ಪಶ್ಚಿಮ ಕರಾವಳಿಯಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳನ್ನು ರಚಿಸಿ ಮೊದಲನೆಯದನ್ನು ಬೊಂಬಾಯಿ ಪ್ರಾಂತ್ಯಕ್ಕೂ ಎರಡನೇ ಮತ್ತು ಮೂರನೇಯದನ್ನು ಮದ್ರಾಸ್ ಪ್ರಾಂತ್ಯಕ್ಕೂ ಈಸ್ಟ್ ಇಂಡಿಯಾ ಕಂಪೆನಿಯ ಸರಕಾರ ಸೇರಿಸಿತು. ಹಾಗೆ ದಕ್ಷಿಣ ಕನ್ನಡ ಜಿಲ್ಲೆಯು ಅಂದಿನಿಂದ ಬ್ರಿಟೀಷ್ ಸಾಮ್ರಾಜ್ಯದೊಳಗಿನ ಒಂದು ವಸಹಾತಾಗಿ ಮಾರ್ಪಾಟು ಹೊಂದಿತು.

ಕರಾವಳಿ ಕರ್ನಾಟಕದ ಜಿಲ್ಲೆಯ 200 ವರ್ಷಗಳ ಚರಿತ್ರೆಯೆಂದರೆ 147 ವರ್ಷಗಳ ವಸಹಾತು ಪ್ರಭುತ್ವದ ಹಾಗೂ ಅದಕ್ಕೆ ವಿರುದ್ಧವಾದ ಹೋರಾಟಗಳ ಚರಿತ್ರೆ ಎನ್ನಬಹುದು ಕೊನೆಯ 53 ವರ್ಷಗಳ ಇತಿಹಾಸವೆಂದರೆ ಸ್ವಾತಂತ್ರ ಭಾರತದೊಳಗಿನ ಒಂದು ಜಿಲ್ಲೆಯಾಗಿ ಅಭಿವೃದ್ಧಿ ಸಾಧಿಸಿದ ಇತಿಹಾಸವಾಗಿದೆ.

ವಸಹಾತುಶಾಹಿ ಆರಂಭದಿಂದ ದೇಶದ ಅನೇಕ ಪ್ರದೇಶಗಳ ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯೂ ಸಹ ವಸಹಾತು ಆಡಳಿತದ ಶೋಷಣೆ, ದಬ್ಬಾಳಿಕೆ ಅನ್ಯಾಯ, ಮಹಿಳೆಯರ ಮೇಲಿನ ಶೋಷಣೆ, ನಿರಂಕುಶಿತ್ವದ ವಿರುದ್ಧ ಹೆಣ್ಣುಮಕ್ಕಳ ಹೋರಾಟಗಳು ಆರಂಭವಾದವು. ಹಾಗೆಯೇ ಮಹಿಳಾ ಸಬಲೀಕರಣದ ವಿಚಾರವಾಗಿ ಯಾವುದೇ ವಿಚಾರಗಳು ನಮಗೆ ಕಾಣಸಿಗುವುದಿಲ್ಲವಾದರೂ ಈ ನಿಟ್ಟಿನಲ್ಲಿ ಕರಾವಳಿ ಕರ್ನಾಟಕದ ಮಹಿಳೆಯರ ವಿಷಯಗಳಿಗೆ ಸಂಬಂಧಿಸಿದಂತೆ ಇದುವರೆಗೂ ಯಾವುದೇ ಪರಿಪೂರ್ಣ ಅಧ್ಯಯನ ಕೈಗೊಂಡಿಲ್ಲವೆಂದು, ಈ ದೋಷವನ್ನು ನಿವಾರಿಸಲು ಒಂದು ವಿಶೇಷ ಹಾಗೂ ಪ್ರಾಮಾಣಿಕ ಪ್ರಯತ್ನದ ಹಿನ್ನೆಲೆಯಲ್ಲಿ ಪ್ರಸ್ತುತ ವಸಾಹತುಶಾಹಿ **"ಕರಾವಳಿ ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗಳ ಅಧ್ಯಯನ" (ಕ್ರಿ.ಶ. 1799 -1947)** ಎಂಬ ವಿಷಯದ ಬಗ್ಗೆ ಪರಿಶೋಧನೆಯನ್ನು ಕೈಗೊಂಡು ಕರಾವಳಿ ಕರ್ನಾಟಕದ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳು, ಸಾಮಾಜಿಕ ಬದಲಾವಣೆಗಳ ಸಂಶೋಧನೆ ನಡೆಸುವ ಪ್ರಯತ್ನ ಇದಾಗಿದೆ.

ಅಧ್ಯಯನದ ಉದ್ದೇಶ :

ಟಿಪ್ಪುವಿನ ಮರಣಾನಂತರ ಕರಾವಳಿ ಕರ್ನಾಟಕವು ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಅಧೀನಕ್ಕೆ ಒಳಪಟ್ಟ ನಂತರ ಕರಾವಳಿ ಕರ್ನಾಟಕವು ಯಾವ ರೀತಿ ಬದಲಾವಣೆಗಳನ್ನು ಕಂಡಿತು?

ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಪ್ರಭುತ್ವಕ್ಕೆ ಒಳಪಟ್ಟ ಕರಾವಳಿ ಕರ್ನಾಟಕದ ಅಭಿವೃದ್ಧಿಯು ಹೇಗೆ ಆಯಿತು? ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ವಿರುದ್ಧ ಕರಾವಳಿ

ಕರ್ನಾಟಕದ ಹೋರಾಟಗಳು, ಸ್ವಾತಂತ್ರ್ಯ ಪೂರ್ವದಲ್ಲಿ ವಿವಿಧ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನಮಾನ ಯಾವ ರೀತಿ ಇತ್ತು? ಕರಾವಳಿ ಕರ್ನಾಟಕದಲ್ಲಿ ಮಹಿಳೆಯರ ರಾಜ್ಯಭಾರ ಇತ್ತೇ? ಮತ್ತು ಮಹಿಳಾ ಆಡಳಿತದಲ್ಲಿ, ಸಮಾಜಿಕ, ಸಾಂಸ್ಕೃತಿಕ ರಂಗದಲ್ಲಿ ಮಹಿಳೆಯರ ಪಾತ್ರವೇನು? ಹಾಗೂ ಆ ರಂಗಗಳಲ್ಲಿ ಮಹಿಳೆಗೆ ಸಮಾನತೆ ಇತ್ತೇ ?

ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಪ್ರಭುತ್ವಕ್ಕೆ ಒಳಪಟ್ಟ ನಂತರ ಕರಾವಳಿ ಕರ್ನಾಟಕದ ಮಹಿಳೆಯರ ಸ್ಥಾನಮಾನ ಯಾವ ರೀತಿ ಬದಲಾವಣೆಯನ್ನು ಕಂಡಿತು? ಮಹಿಳೆಯು ವಿವಿಧ ಕ್ಷೇತದಲ್ಲಿ ತನ್ನನ್ನು ಹೇಗೆ ಗುರುತಿಸಿಕೊಂಡಳು?, ಅಥವಾ ವಸಹಾತುಶಾಹಿ ಕಾಲದಲ್ಲಿ ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಿ ಮಹಿಳೆ ಸದೃಢವಾದ ಸ್ಥಾನ ಪಡೆದಿದ್ದಳೇ? ಮಹಿಳೆಯರು ವಿವಿಧ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಹಾಗೂ ಸಾಧನೆಗಳೇನು? ಆಕೆ ಸಮಾನತೆ ಹಾಗೂ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳಲು ಅರ್ಹತೆ ಪಡೆದಿದ್ದಳೇ ? ಎಂಬುವುದರ ಕುರಿತಾಗಿ ಅಧ್ಯಯನವನ್ನು ನಡೆಸಲಾಗಿದೆ.

ಸ್ವಾತಂತ್ರ್ಯದ ಸಲುವಾಗಿಯೂ ಅಭಿವೃದ್ಧಿಯ ಸಲುವಾಗಿಯೂ ನಡೆದಿರುವ ಹೋರಾಟಗಳ ಮತ್ತು ಚಳುವಳಿಗಳ ಕಡೆಗೊಂದು ಹಿನ್ನೋಟ ಬೀರುವುದು ಅಗತ್ಯವೆನಿಸುತ್ತದೆ. ವಸಹಾತುಶಾಹಿ ಕಾಲದಿಂದ ಮಹಿಳೆಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಕಂಡಳು? ಎಂಬುದರ ಕುರಿತಾಗಿ ವಿಶ್ಲೇಷಿಸುವ ಪ್ರಯತ್ನ ಈ ಪ್ರಬಂಧದಲ್ಲಿ ಮಾಡಿರುತ್ತೇನೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಗೆ ಯಾವ ರೀತಿಯ ಗೌರವ ದೊರಕುತ್ತಿತ್ತು. ಮಹಿಳೆಯರನ್ನು ಯಾವ ರೀತಿಯಾಗಿ ನಡೆಸಿಕೊಳ್ಳುತ್ತಿದ್ದರು ಎಂಬುದರ ಬಗ್ಗೆ ಯಾವುದೇ ಸಂಪೂರ್ಣವಾದ ಮತ್ತು ಸಮಗ್ರವಾದ ಮಾಹಿತಿಯು ನಮಗೆ ಲಭ್ಯವಾಗಿರದ ಕಾರಣದಿಂದಾಗಿ ಅಧ್ಯಯನ ಮಾಡುವುದು ಕೂಡಾ ಒಂದು ಉದ್ದೇಶವಾಗಿದೆ.

ಸಂಶೋಧನಾ ವಿಧಾನ :

ಈ ಸಂಶೋಧನೆಯನ್ನು ಮಾಡಲು, ಮಾಹಿತಿ ಸಂಗ್ರಹಿಸಲು ಮತ್ತು ವಿಶ್ಲೇಷಿಸಲು ಹಲವಾರು ಮಾರ್ಗಗಳನ್ನು ಅನುಸರಿಸಲಾಗಿದೆ. ಕರಾವಳಿ ಕರ್ನಾಟಕದ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಇತಿಹಾಸ ಗ್ರಂಥ, ಮೌಖಿಕ ಚರಿತ್ರೆ, ಐತಿಹ್ಯ, ಸಾಹಿತ್ಯ, ಲೇಖನ, ಸಂಶೋಧನಾ ವಿಷಯಗಳ ಬಗೆಗಿನ ವರದಿ, ಶಾಸನ, ಚಾರಿತ್ರಿಕ ಪರಿಕರ, ಪಾರಂಪರಿಕ ವಿಚಾರಗಳ ಬಗೆಗಿನ ಸಮಾಜದ ಹಿರಿಯರಿಂದ ಮಾಹಿತಿ ಮುಂತಾದವುಗಳನ್ನು ಅವಲಂಬಿಸಬೇಕಾಗಿದೆ. ವಸಾಹತು ಶಾಹೀ ವ್ಯವಸ್ಥೆಯಡಿ ಬರುವ ವಿಶ್ಲೇಷಣೆಗೆ ವಿಶೇಷವಾಗಿ ಪತ್ರಾಗಾರಗಳಲ್ಲಿ ಲಭ್ಯವಿರುವ ದಾಖಲೆ, ಸಾಹಿತ್ಯ, ವರದಿ ಮುಂತಾದವುಗಳು ಕಾಲಕಾಲಕ್ಕೆ ಹೊರಡಿಸಿರುವ ಗೆಜೆಟಿಯರ್, ಗ್ರಂಥ ಲೇಖನಗಳು, ಸಂಶೋಧನಾ ವರದಿಗಳು, ಸಂಶೋಧನಾ ಪ್ರಬಂಧಗಳು, ಮುಂತಾದವುಗಳನ್ನು ಅವಲಂಭಿಸಲಾಗಿದೆ.

ಇವುಗಳ ಜೊತೆಗೆ ಇತಿಹಾಸ ತಜ್ಞರ ಮೌಖಿಕ ಅಭಿಪ್ರಾಯ ಸಂಗ್ರಹ, ಅಗತ್ಯ ಐತಿಹಾಸಿಕ ಕುರುಹುಗಳೆಲ್ಲದರ ಸಂದರ್ಶನ ಅವುಗಳಿಗೆ ಸಂಬಂಧಿಸಿದ ಬರವಣಿಗೆ, ಸಂಗ್ರಹ, ಮುಂತಾದ ವಿಧಾನಗಳನ್ನು ಸಂಶೋಧನೆಗೆ ಅಳವಡಿಸಲಾಗಿದೆ.

ಕರಾವಳಿ ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯರ ವಿವಿಧ ಕ್ಷೇತ್ರಗಳಲ್ಲಿನ ಕೊಡುಗೆಗಳ ಸರ್ವೇಕ್ಷಣೆಯನ್ನು ಮಾಡಲು, ಕರಾವಳಿ ಕರ್ನಾಟಕದ ಮಹಿಳೆಯರ ವಿಚಾರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲು ಹಾಗೆಯೇ, ಕರಾವಳಿ ಕರ್ನಾಟಕದ ಒಳಗಿನ ಮತ್ತು ಹೊರಗಿನ ಚಟುವಟಿಕೆಗಳನ್ನು ಸಂಗ್ರಹಿಸಲು ಸರ್ವೇಕ್ಷಣೆಯನ್ನು ಮಾಡಲಾಗಿದೆ.

ಐತಿಹಾಸಿಕ ಮಾಹಿತಿಗಳನ್ನು ಸಂಗ್ರಹಿಸಲು ತುಳುನಾಡಿನ ಒಳಗಿನ ಮತ್ತು ಹೊರಗಿನ ಚಿತ್ರಣವನ್ನು ಸಂಗ್ರಹಿಸಬೇಕಾಗಿದೆ. ವಸಾಹತುಶಾಹೀ ಸಂದರ್ಭದಲ್ಲಿನ ಬ್ರಿಟಿಷ್ ಇತಿಹಾಸಕಾರರ ಅಭಿಪ್ರಾಯ ಸಂಗ್ರಹಣೆಯ ವರದಿಗಳನ್ನು ಚರ್ಚಿಸಬೇಕಾಗಿದೆ. ಕರಾವಳಿ ಕರ್ನಾಟಕ ಐತಿಹಾಸಿಕವಾಗಿ ವ್ಯಾಪಾರಿ ಕೇಂದ್ರವಾಗಿದ್ದರಿಂದ ಆ ನೆಲೆಯಿಂದಲೂ ವ್ಯಾಖ್ಯಾನಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ಒಳನೋಟ

ಇಪ್ಪತ್ತನೆಯ ಶತಮಾನದ ಮೊದಲ ಮೂರು ದಶಕಗಳಲ್ಲಿ ಕರಾವಳಿ ಇತಿಹಾಸದ ಸಂಶೋಧನೆ ಹಾಗೂ ಅಧ್ಯಯನದ ಮೂಲಕ ಇತಿಹಾಸ ರಚನೆಗೆ ಆಸ್ತಿ ಭಾರವನ್ನು ಹಾಕಿದವರಲ್ಲಿ ಪೊಳಲಿ ಶೀನಪ್ಪ ಹೆಗ್ಗಡೆ, ಮಂಜೇಶ್ವರ ಗಣಪತಿರಾವ್ ಐಗಳ್, ಮಂಜೇಶ್ವರ ಗೋವಿಂದ ಪೈ, ಭಾಸ್ಕರ ಆನಂದ ಸಾಲೆತ್ತೂರ್, ಕಾರ್ಕಳ ಕೇಶವ ಕೃಷ್ಣ ಕುಡ್ವ ಮುಂತಾದವರು ಅಗ್ರಮಾನ್ಯರು.

ಮಂಜೇಶ್ವರ ಗಣಪತಿರಾವ್ ಐಗಳ್‌ರವರ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ಸ್ಥಳ ಪುರಾಣ ಮುಂತಾದುವುಗಳ ಆಧುನಿಕ ಸಂಶೋಧನಾ ವಿಧಾನಕ್ಕೆ ನಿಕಟವಾಗಿದ್ದು ಕಾರ್ಯಕ್ಷೇತ್ರದ ದಾಖಲೆಗಳ ನೆರವಿನೊಂದಿಗೆ ಮಾಡಲ್ಪಟ್ಟ ಅಧ್ಯಯನವಾಗಿದೆ. ಅವರನ್ನು ತುಳುನಾಡಿನ ಇತಿಹಾಸ ರಚನೆಗೆ ಆಯಾಮವನ್ನಿತ್ತ ವಿದ್ವಾಂಸರೆಂದು ಪರಿಗಣಿಸಬಹುದಾದರೂ ಅವರ ಅಧ್ಯಯನಗಳು ವಿಮರ್ಶಾತ್ಮಕ ದೃಷ್ಟಿಕೋನದಿಂದ ವಂಚಿತವಾಗಿದೆ. ಅವರ ಮಹತ್ವದ ಕೊಡುಗೆ ಈ ಪ್ರದೇಶದ ಸ್ಥಳೀಕ ಅರಸು ಮನೆತನಗಳಿಗೆ ಸಂಬಂಧಿಸಿದ ಸಂಶೋಧನೆ.

ದುಗ್ಗಪ್ಪ ಕಜೆಕಾರ್ ರವರ 'ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಿಗೆ ಸಂಬಂಧಿಸಿದ ಸಾಮಾಜಿಕ ಸಂಶೋಧನೆಗಳು' ಪೋರ್ಚುಗೀಸರು 16ನೇ ಶತಮಾನದಲ್ಲಿ ಕರ್ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಮತ್ತು ಉತ್ತರಕನ್ನಡವನ್ನು ಸೇರಿಸಿಕೊಂಡು 'ಕೆನರಾ' ಎಂದು ಕರೆದರು. 'ಕೆನರಾ' ಎಂದರೆ ಕನ್ನಡ ಎಂದರ್ಥ. ಐರೋಪ್ಯರು 'ಡ' ಅಕ್ಷರದ ಬದಲು 'ರ' ಉಪಯೋಗಿಸುತ್ತಿದ್ದುದು ಸಾಮಾನ್ಯ. ನಂತರ ಬ್ರಿಟಿಷರು ಕೂಡಾ ಈ ಪ್ರದೇಶವನ್ನು 'ಕೆನರಾ' ಎಂದೇ ಕರೆಯತೊಡಗಿದರು. 1860ರಲ್ಲಿ ಬ್ರಿಟಿಷರೇ ಉತ್ತರಕನ್ನಡವನ್ನು ಮುಂಬೈ ಪ್ರಾಂತಕ್ಕೆ ಮತ್ತು ದಕ್ಷಿಣ ಕನ್ನಡವನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸಿದರು. 1956ರಲ್ಲಿ ರಾಜ್ಯಗಳ ಪುನರ್

ರಚನೆಯಾದಾಗ ಈ ಎರಡೂ ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರ್ಪಡೆಯಾದವು. ಆದರೆ ಕೇರಳದ ಕೆ.ಎಂ.ಫಣಿಕ್ಕರ್ ಎಂಬುವವರ ಹೋರಾಟದ ಫಲವಾಗಿ ಕಾಸರಗೋಡು ದಕ್ಷಿಣ ಕನ್ನಡದಿಂದ ಬೇರ್ಪಟ್ಟಿರುವುದು ನಮಗೆಲ್ಲ ತಿಳಿದ ವಿಷಯ.

ಇಪ್ಪತ್ತನೆಯ ಶತಮಾನದ ನಾಲ್ಕನೇ ದಶಕದಲ್ಲಿ ರಾಜಕೀಯ ಮತ್ತು ಸಾಮ್ರಾಜ್ಯ ಶಾಖೆ ಇತಿಹಾಸಗಳ ರಚನೆಗೆ ಹೆಚ್ಚು ಚಾಲನೆ ದೊರೆತು ತುಳುನಾಡಿನ ರಾಜಕೀಯ ಚರಿತ್ರೆ ಬರವಣಿಗೆಗಾರರ ಗಮನ ಸೆಳೆಯಿತು. ಕರ್ನಾಟಕದ ಪ್ರಮುಖ ರಾಜಮನೆತನಗಳು ಈ ಪ್ರದೇಶದಲ್ಲಿ ಪ್ರಭುತ್ವ ಸ್ಥಾಪಿಸಿದ್ದರಿಂದ ಆ ರಾಜಮನೆತನಗಳ ರಾಜಕೀಯ ಚರಿತ್ರೆಗಳು ಮುಂಚೂಣಿಗೆ ಬಂದವು. ಕದಂಬ, ಅಲುಪ, ಹೊಯ್ಸಳ, ವಿಜಯನಗರ, ಇಕ್ಕೇರಿ, ಮೈಸೂರಿನ ಆಡಳಿತ ಮುಂತಾದ ಆಡಳಿತ ವ್ಯವಸ್ಥೆಗಳು ಇಲ್ಲಿನ ರಾಜಕೀಯ ಚರಿತ್ರೆಯ ಬರವಣಿಗೆಯ ಪ್ರಾಧಾನ್ಯ ನೆಲೆಗಳಾಗಿ ಕಾಣಿಸಿಕೊಂಡವು. ಈ ನಿಟ್ಟಿನಲ್ಲಿ **ಕೆ. ವಿ. ರಮೇಶರ 'ಎ ಹಿಸ್ಟರಿ ಆಫ್ ಸೌತ್ ಕೆನರಾ', 'ತುಳುನಾಡಿನ ಇತಿಹಾಸ'** ಗ್ರಂಥಗಳು ಪ್ರಮುಖವಾದುದು. ಕೆ.ವಿ.ರಮೇಶರು ತಮ್ಮ ಸಂಶೋಧನಾ ಕೃತಿಗಳಲ್ಲಿ ತುಳುನಾಡಿನ ಪ್ರಾಚೀನ, ಮಧ್ಯಯುಗೀನಾ ಅಂದರೆ ಮುಖ್ಯವಾಗಿ ವಿಜಯನಗರದ ರಾಜಕೀಯ ಪ್ರಭಾವವನ್ನು ದಾಖಲಿಸಿದ್ದಾರೆ. ಆದರೂ ಅವುಗಳಲ್ಲಿ ಮಹಿಳೆಯರ ಇತಿಹಾಸಕ್ಕೆ ಸಂಬಂಧಿಸಿದ ಉಲ್ಲೇಖಗಳು ವಿರಳ. ಇದಲ್ಲದೇ ಎಂ.ಜೆ.ಶರ್ಮರ ಜೊತೆಗೂಡಿ ಶಾಸನಗಳ ಅಧ್ಯಯನ ಮಾಡಿ ತುಳುನಾಡಿನ ಚರಿತ್ರೆಯ ಬರವಣಿಗೆ ಮಹತ್ವದ ಕೊಡುಗೆ ನೀಡಿದ್ದಾರೆ.

ತುಳುನಾಡಿನ ಚರಿತ್ರೆಯ ಪುನರ್ ರಚನೆಯಲ್ಲಿ ಗುರುರಾಜಭಟ್ಟರ ಕೊಡುಗೆ ಅದ್ವಿತೀಯವೆಂದು ಪರಿಗಣಿಸಲ್ಪಟ್ಟಿದೆ. ಅವರ **'ಸ್ಟಡೀಸ್ ಇನ್ ತುಳುವ ಹಿಸ್ಟರ್ ಆಂಡ್ ಕಲ್ಚರ್'** ತುಳುನಾಡಿನ ವಿಶ್ವಕೋಶವೆಂದೇ ಪರಿಗಣಿಸಲ್ಪಟ್ಟಿದೆ. ಇಲ್ಲಿನ ಚರಿತ್ರೆಯನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಮೌಲ್ಯಯುಕ್ತ ಆಕರ ಗ್ರಂಥವಾಗಿ ಪರಿಗಣಿಸಲ್ಪಟ್ಟಿದೆ. ಇದಲ್ಲದೇ ಅವರ ಇನ್ನಿತರ ಸಂಶೋಧನಾ ಗ್ರಂಥಗಳಾದ ತುಳುನಾಡು, ತುಳುನಾಡಿನ ಚರಿತ್ರೆಯಲ್ಲಿ ಬಾರಕೂರು, ತುಳುನಾಡಿನ ಬಗೆಗಿನ ಅತ್ಯಂತ ಉಪಯುಕ್ತ ಕೃತಿಗಳಾಗಿವೆಯಾದರೂ ಇಲ್ಲಿಯೂ ಸಹ ಮಹಿಳೆಯರ ಸ್ಥಿತಿಗತಿಗಳಿಗೆ ಸಂಬಂಧಿಸಿದ ನೇರ ಪ್ರಸ್ತಾಪಗಳಲ್ಲವಾದರೂ ನನ್ನ ಸಂಶೋಧನಾ ದೃಷ್ಟಿಯಿಂದ ಉಪಯುಕ್ತ ಮಾಹಿತಿ ಇರುವ ಕೃತಿಯಾಗಿರುವುದರಿಂದ ಸಂಪೂರ್ಣ ವಿಶ್ಲೇಷಣೆಯನ್ನು ಮಾಡಿದೆ.

ಡಾ. ಪಿ. ಗುರುರಾಜ್ ಭಟ್ಟರ ಪುಸ್ತಕಗಳು ಸಂಶೋಧನಾ ಕೃತಿಗಳಾಗಿವೆ. 1975ರಲ್ಲಿ ಪ್ರಕಟಿಸಿದ **'ಸ್ಟಡೀಸ್ ಇನ್ ತುಳುವಾ ಹಿಸ್ಟರಿ ಆಂಡ್ ಕಲ್ಚರ್'** ಇದೊಂದು ಪರಿಪೂರ್ಣವಾದ ರಚನಾತ್ಮಕವಾದ ಗ್ರಂಥವೆಂದು ಹೇಳಬಹುದು. ಇದರಲ್ಲಿ ಕರಾವಳಿ ಪ್ರದೇಶದ ಇತಿಹಾಸ, ರಾಜಕೀಯ ಇತಿಹಾಸ, ಸಾಂಸ್ಕೃತಿಕ ಇತಿಹಾಸ, ಸಾಮಾಜಿಕ ಇತಿಹಾಸದ ಬಗ್ಗೆ ಚರ್ಚಿಸಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯ ಸ್ಥಾಪನೆ ಆದ ನಂತರ ಕರಾವಳಿ ಕರ್ನಾಟಕದ ಇತಿಹಾಸ ಮತ್ತು ಮೌಖಿಕ ಚರಿತ್ರೆಯ ಬಗ್ಗೆ ಹಲವಾರು ಆಯಾಮಗಳಲ್ಲಿ ಅಧ್ಯಯನಗಳು ಮಾಡಲ್ಪಟ್ಟಿವೆ. ಇವರುಗಳ ಮಾರ್ಗದರ್ಶನದಲ್ಲಿ ಮಂಡಿಸಲ್ಪಟ್ಟ ಹಲವಾರು ಸಂಶೋಧನಾ ಪ್ರಬಂಧಗಳು ಕರಾವಳಿ

ಕರ್ನಾಟಕದ ಚರಿತ್ರೆ ಹಾಗೂ ಸಂಸ್ಕೃತಿಯ ಹಲವಾರು ಆಯಾಮಗಳನ್ನು ಅನಾವರಣಗೊಳಿಸಿದೆ. ಹಾಗೆಯೇ ಸೈಯ್ಯದ್ ಅಬ್ದುಲ್ ಬಾರಿಯವರ ನಾನ್ ಅಗ್ರೇರಿಯನ್ ಟಾಕ್ಸೇಷನ್ ಇನ್ ಕರ್ನಾಟಕ ಆಂಡರ್ ವಿಜಯನಗರ, ಎನ್ ಶ್ಯಾಮಭಟ್ಟರ **'ಕಲೋನಿಯಲ್ ಅಡ್ಮಿನಿಸ್ಟ್ರೇಷನ್ ಆಂಡ್ ರೆಸ್ಪಾನ್ಸ್', ಮಾಲತಿ ಮೂರ್ತಿಯವರ 'ಟ್ರೇಡ್ ಇನ್ ಇರಾ', ವಿಲ್ಸನ್ ಪ್ರಭಾಕರರ 'ಬಾಸಲ್ ಮಿಷನ್ ಇನ್ ಸೌತ್ ಕೆನರಾ'** ಮುಂತಾದ ಸಂಶೋಧನ ಪ್ರಬಂಧಗಳು ಕರಾವಳಿ ಕರ್ನಾಟಕದ ಅದರಲ್ಲೂ ತುಳುನಾಡಿನ ಚರಿತ್ರೆಯ ಹಲವಾರು ಆಯಾಮಗಳ ಬಗ್ಗೆ ವಿಶ್ಲೇಷಣೆ ನಡೆಸಿದೆ.

ಕರಾವಳಿ ಕರ್ನಾಟಕಕ್ಕೆ ಸಂಬಂಧಿಸಿದ ವೀರರ ಆರಾಧನೆ, ಜನಾಂಗೀಯ ಅಧ್ಯಯನಗಳು, ಜನಪದ ಸಾಹಿತ್ಯಗಳು, ಮೌಖಿಕ ಚರಿತ್ರೆಗೆ ಸಂಬಂಧಿಸಿದ ಅಧ್ಯಯನಗಳ ಕರಾವಳಿ ಕರ್ನಾಟಕದ ಇತಿಹಾಸದ ಬಗೆಗಿನ ಪರಿಜ್ಞಾನವನ್ನು ಶ್ರೀಮಂತಗೊಳಿಸಿವೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ ತನ್ನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಗೊಳಿಸಿದ ನಂತರ ಕರಾವಳಿ ಕರ್ನಾಟಕದ ಮೌಖಿಕ ಚರಿತ್ರೆ, ತಳಸಮುದಾಯ ಚರಿತ್ರೆ, ಸ್ಥಳೀಯ ಇತಿಹಾಸ ರಚನೆಗೆ ಸಾಕಷ್ಟು ಉತ್ತೇಜನ ಸಿಕ್ಕಿದೆಯಲ್ಲದೇ ಚರಿತ್ರೆಗೆ ಸಂಬಂಧಿಸಿದ ಹಲವಾರು ಸಂಶೋಧನಾ ಲೇಖನಗಳು, ಪ್ರಬಂಧಗಳು, ವೈಚಾರಿಕ ಗ್ರಂಥಗಳು ಪ್ರಕಾಶಿತಗೊಂಡಿವೆ. ಇವುಗಳು ಕರಾವಳಿ ಕರ್ನಾಟಕದ ಅದರಲ್ಲೂ ತುಳುನಾಡಿನ ಚರಿತ್ರೆಯ ವಿಭಿನ್ನ ಮಜಲುಗಳನ್ನು ಅನಾವರಣಗೊಳಸುವುದರ ಮೂಲಕ ಚರಿತ್ರೆಯ ಹರವನ್ನು ವಿಶ್ಲೇಷಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿವೆ.

ತುಳುನಾಡಿನ ಕಿರುರಾಜಮನೆತನಗಳು ಸ್ಥಳೀಯವಾದ ಆಡಳಿತದಲ್ಲಿ ಸಕ್ರೀಯವಾಗಿ ಆರಂಭದಿಂದಲೂ ಆಡಳಿತ ಮಾಡಿದ್ದಾರೆ. ಆಳೂಪರಿಂದ ಹಿಡಿದು, ಸ್ವಾತಂತ್ರ್ಯೋತ್ತರದ ಕಾಲದಲ್ಲಿಯೂ ಅವರು ತಮ್ಮದೇ ಆದಂತಹ ಆಚರಣೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಬಂಗವಾಡಿಯ ಬಂಗರು, ಅವರ ಒಡೆತನದಲ್ಲಿ ಮೇಲ್-ಬಂಗಾಡಿ, ಕೆಳ-ಬಂಗಾಡಿ, ಬೆಳ್ತಂಗಡಿ, ಮಾಯ-ಬಯಲು, ಉಪ್ಪಿನಂಗಡಿ, ಪುತ್ತೂರು, ಮೊಗರ ನಾಡು, ಮಣಿ-ನಾಲ್ಕೂರು, ಬಾರ್ಯ-ಕಾಜೆಕಾರು, ಬಂಟ್ವಾಳ, ಕೋಡಿಯಾಲ, ಸಾಜಿಪ, ಹರೆಕಳ, ವರಕಾಡಿ, ಮಂಜೇಶ್ವರ, ಬಾಜಲ ಸೀಮೆ, ಮಣಿಲ ಸೀಮೆ, ಮುಂಡುಕುರು-ಸೀಮೆ, ಬೈಲು ಸೀಮೆ, ವೋಮಂಜೂರು-ಸೀಮೆ ಮತ್ತು ನೀರುಮಾರ್ಗ-ಸೀಮೆ. ಈ ಎಲ್ಲ ಪ್ರದೇಶಗಳು ಬಂಗವಾಡಿಯ ನಾಡಿನಲ್ಲಿದ್ದವು ಎಂದು ಹೇಳಬಹುದು. ಈ ಮನೆತನದ ಕೆಲವು ಶಾಸನಗಳು ದೇವಾಲಯಗಳಿಗೆ ಉಂಬಳಿಗಳನ್ನು ಬಿಟ್ಟಂತಹ ದಾಖಲೆಗಳಿವೆ.

ಡಾ. ಡಿ. ಮಂಗಳಾ ಪ್ರಿಯದರ್ಶಿನಿ, "ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ", ನನ್ನ ಸಂಶೋಧನಾ ವಿಷಯದ ಅಂಶಗಳಿಗೆ ಪೂರಕವಾದ ಅಂಕಣವಾಗಿದ್ದು, ಇದರಲ್ಲಿ ಭಾರತದಲ್ಲಿ ಮಹಿಳಾ ಹೋರಾಟಗಳು, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳಾ ಚಳುವಳಿಗಳು, ಪ್ರಚಲಿತ ಮಹಿಳಾ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಹಾಗೆಯೇ ಮಹಿಳೆಯರ ಸ್ಥಿತಿಗತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಕೂಡ ಉಲ್ಲೇಖಿಸಿದ್ದಾರೆ.

ಡಾ. ಎಂ. ಉಷಾ "ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು", ಭಾರತದ ಮಹಿಳಾ ಚಳುವಳಿ ನಡೆದು ಬಂದ ದಾರಿ ಎಂಬ ಅಂಕಣದಲ್ಲಿ 1910ರ ವೇಳೆಗೆ ರಾಷ್ಟ್ರೀಯ ಮಹಿಳಾ ಚಳುವಳಿಗಳು ಹೇಗೆ ತಲೆ ಎತ್ತಿದವು ಎಂಬುದರ ಬಗ್ಗೆ ಚರ್ಚಿಸಿದ್ದಾರೆ. ಹಾಗೆಯೇ ಆಧುನಿಕ ಪೂರ್ವ ಭಾರತದಲ್ಲಿ ಮಹಿಳೆ, ಬ್ರಿಟಿಷ್ ಆಳ್ವಿಕೆಯಲ್ಲಿ ಮಹಿಳೆ, ಭಾರತದ ಸಂವಿಧಾನದಲ್ಲಿ ಮಹಿಳೆ ಮುಂತಾದ ವಿಷಯಗಳ ಬಗ್ಗೆ ಸವಿವರಣೆಯನ್ನು ನೀಡಿದ್ದಾರೆ.

ಸಾರಾ ಅಬೂಬಕ್ಕರ್, "ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ" ಮಹಿಳೆ ಮತ್ತು ಕೋಮುವಾದ, ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಕಾನೂನು, ಮುಸ್ಲಿಂ ಸಮಾಜದ ಮಹಿಳೆಯರ ಕೆಲವು ಸಮಸ್ಯೆಗಳು, ಮಹಿಳಾ ಸಂವೇದನೆ , ಮಹಿಳೆ ಮತ್ತು ಆರ್ಥಿಕ ಸ್ವಾತಂತ್ರ್ಯ ಹೀಗೆ ಹಲವಾರು ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ. ಈ ಕೃತಿಯಲ್ಲಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಸ್ಲಿಂ ಮಹಿಳೆಯರ ಸ್ಥಿತಿಗತಿಯ ಬಗ್ಗೆ ವಿವರಣೆಯನ್ನು ನೀಡಿದ್ದಾರೆ.

ಡಾ.ಸಬಿಹಾ ಭೂಮಿಗೌಡ, "ಮಹಿಳೆ ಇಂದಿನ ಸವಾಲುಗಳು", ಜಾತಿ ಧರ್ಮಗಳು ಯುವ ಪೀಳಿಗೆಯ ಮದುವೆಯ ಆಯ್ಕೆಗೆ ಹೇಗೆ ತೊಡರುಗಳಾಗಿವೆಯೆಂದು ಚರ್ಚಿಸಿದ್ದಾರೆ. ಜೊತೆಗೆ ಲೈಂಗಿಕ ದೌರ್ಜನ್ಯ, ವೃತ್ತಿ ಆಯ್ಕೆಯಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಲಿಂಗ ತಾರತಮ್ಯ, ಕೋಮುವಾದ ಬಲಗೊಳ್ಳುತ್ತಿರುವ ದಿನಗಳಲ್ಲಿ ಮಹಿಳೆಯರ ಆತಂಕ ಮತ್ತು ಪಾಲುದಾರಿಕೆ, ಧರ್ಮ ಸಮಾಜ ದಾಂಪತ್ಯದಲ್ಲಿ ಲಿಂಗ ತಾರತಮ್ಯ ಮುಂತಾದ ನನ್ನ ಸಂಶೋಧನೆಗೆ ಅಗತ್ಯವಿರುವ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳಾಗಿವೆ. ಇವರ ಬರಹಗಳು ಯುವ ಪೀಳಿಗೆ ಹಾಗೂ ಮಹಿಳಾ ಅಧ್ಯಯನದಲ್ಲಿ ಆಸಕ್ತಿಯಿರುವವರಿಗೆ ಅಗತ್ಯವಾದವು.

ಡಾ. ಹಾಲತಿ ಸೋಮಶೇಖರ್, "ಸ್ತ್ರೀ ಪರ: ಕಾನೂನುಗಳು ಮತ್ತು ಸಂಘಟನೆಗಳು", ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಮಹಿಳೆಯ ಮೇಲಿನ ದೌರ್ಜನ್ಯಗಳನ್ನು ಹತೋಟಿಯಲ್ಲಿಡಲು ಏನೇನು ಪ್ರಯತ್ನಗಳು ನಡೆದಿವೆ, ಅದರಲ್ಲೂ ಸ್ವಾತಂತ್ರ್ಯ ನಂತರದ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹಲವು ಬದಲಾವಣೆಗಳನ್ನು ಕಂಡಿರುವಾಗ ಹೆಣ್ಣಿನ ಬದುಕಿನ ಬಗ್ಗೆ ಸ್ಪಂದನ ಹೇಗಿದೆ? ಎಂಬುದರ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಕಾನೂನುಗಳು ಮಾತ್ರ ಹೆಣ್ಣನ್ನು ಸುಧಾರಿಸಲಾರವು ಎಂಬುದನ್ನು ಕೂಡಾ ಸ್ಪಷ್ಟ ಪಡಿಸಿದ್ದಾರೆ.

ಡಾ. ಜ್ಯೋತ್ಸ್ನಾ ಕಾಮತ್, "ಮಹಿಳೆ ಒಂದು ಅಧ್ಯಯನ" ಹತ್ತರಿಂದ ಹದಿನೆಂಟನೆಯ ಶತಮಾನದ ಪ್ರಾಚೀನ ಶಿಕ್ಷಣದ ಕುರಿತಾದ ಸವಿವರಣೆಯನ್ನು ನೀಡಿದ್ದಾರೆ. ಹಾಗೆಯೇ ನನ್ನ ಸಂಶೋಧನೆಗೆ ಬೇಕಾದಂತಹ ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದಂತಹ ಕನ್ನಡಿಗ ವಿಜ್ಞಾನೇಶ್ವರನು ಬರೆದ 'ಮಿತಾಕ್ಷರ' (ಕ್ರಿ.ಶ.1100) ಎಂಬ ಕೃತಿಯಲ್ಲಿ ಮಹಿಳೆಯ ಸ್ಥಾನಮಾನದ ಬಗ್ಗೆ, ಬಹುಪತ್ನಿತ್ವ, ಹೆಣ್ಣು ಸಂತಾನ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಿರುವರು.

ಡಾ. ಹೇಮಲತಾ ಹೆಚ್. ಎಂ, "ಮಹಿಳಾ ಅಧ್ಯಯನ (ಅರ್ಥ, ಹುಟ್ಟು, ಬೆಳವಣಿಗೆ, ಪರಿಕಲ್ಪನೆ, ಸಿದ್ಧಾಂತಗಳು)", ಮಹಿಳಾ ಅಧ್ಯಯನ ಎಂದರೇನು? ಅದರ ಹುಟ್ಟು, ಬೆಳವಣಿಗೆ, ಸ್ತ್ರೀವಾದಿ ಸಂಶೋಧನಾ ವಿಧಾನದ ಮಾರ್ಗಸೂತ್ರಗಳು, ಮಹಿಳಾ ಅಧ್ಯಯನ ಮೂಲ ಪರಿಕಲ್ಪನೆಗಳ ಬಗ್ಗೆ ಉತ್ತಮವಾದ ವಿವರಣೆಯನ್ನು ನೀಡಿದ್ದು ಮಹಿಳಾ ಅಧ್ಯಯನದ ಸಂಶೋಧನೆಗೆ ಉಪಯುಕ್ತವಾದ ಮಾಹಿತಿಯಾಗಿದೆ.

ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದಂತೆ ವೈವಿಧ್ಯಮಯ ಆಧಾರ ಗ್ರಂಥಗಳು ಲಭ್ಯವಾಗುತ್ತದೆ. ಈ ಆಧಾರ ಗ್ರಂಥಗಳನ್ನು ಪ್ರಧಾನವಾಗಿ ಪ್ರಾಥಮಿಕ ಆಧಾರ ಗ್ರಂಥಗಳು ಹಾಗೂ ಮಾಧ್ಯಮಿಕ ಆಧಾರ ಗ್ರಂಥಗಳು ಎಂದು ಎರಡು ಗುಂಪುಗಳನ್ನಾಗಿ ವಿಭಜಿಸಿಕೊಳ್ಳಲಾಗಿದೆ.

ಪ್ರಾಥಮಿಕ ಆಧಾರ ಗ್ರಂಥಗಳಲ್ಲಿ ಪ್ರಮುಖವಾಗಿ **"ಪೊಲಿ" ಕೆನರಾ 200, ಶ್ರೀ ಎಂ. ಮುಕುಂದ ಪ್ರಭು ರಚಿಸಿರುವ** ಗ್ರಂಥವು ನಮಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ. ಈ ಗ್ರಂಥದಲ್ಲಿರುವ ಹಲವಾರು ಅಂಕಣಗಳು ಸಂಶೋಧನೆಗೆ ಬೇಕಾದಂತಹ ವಿಪುಲ ಮಾಹಿತಿಗಳು ಉಪಯುಕ್ತವಾಗಿದೆ.

ಈ ಗ್ರಂಥದಲ್ಲಿ ಕರಾವಳಿ ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದಂತಹ ವಿಚಾರಗಳು, ಸಾಮಾಜಿಕ, ಸಾಂಸ್ಕೃತಿಕ ಸುಧಾರಣೆಗಳು, ಮಹಿಳಾ ಸಾಹಿತ್ಯ, ಚಳುವಳಿಯ ನೆನಪುಗಳು ಮುಂತಾದ ಮಾಹಿತಿಯು ಸಂಶೋಧನೆಗೆ ಬೆಳಕು ಚೆಲ್ಲುತ್ತದೆ.

ದಕ್ಷಿಣ ಕನ್ನಡ ಗೆಜೆಟಿಯರ್‌ನಲ್ಲಿ ಕರಾವಳಿ ಕರ್ನಾಟಕದ ಬಗ್ಗೆ ಸಮಗ್ರ ಮಾಹಿತಿಯು ದೊರಕಿರುವುದರಿಂದ ಇದರಲ್ಲಿ ಕರಾವಳಿ ಕರ್ನಾಟಕವು ಯಾವೆಲ್ಲ ಜಿಲ್ಲೆಗಳನ್ನು ಒಳಗೊಂಡಿತ್ತು ಮತ್ತು ಟಿಪ್ಪುವಿನ ಮರಣಾನಂತರ ಬ್ರಿಟೀಷ್ ಆಳ್ವಿಕೆಗೆ ಒಳಪಟ್ಟ ದಕ್ಷಿಣ ಕನ್ನಡವು ಯಾವ ರೀತಿಯಾಗಿ ಈಸ್ಟ್ ಇಂಡಿಯಾ ಪ್ರಭುತ್ವದಿಂದ ಹೊರಬರಲು ನಡೆಸಿದ ಹೋರಾಟಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯು ಲಭ್ಯವಾಗುವುದರಿಂದ ವಸಹಾತುಶಾಹಿ ಕರಾವಳಿ ಕರ್ನಾಟಕದ ಮಹಿಳೆಯರ ಪರಿವರ್ತನೆಗಳ ಬಗ್ಗೆಯೂ ಅಲ್ಪಸ್ವಲ್ಪ ಮಾಹಿತಿಯು ಸಿಗುತ್ತದೆ. ಹಾಗೆಯೇ ಕರಾವಳಿ ಪ್ರದೇಶವು ಉಡುಪಿ ಮತ್ತು ಮಂಗಳೂರು (ದ.ಕ.) ಜಿಲ್ಲೆಗಳ ಕರಾವಳಿಯಲ್ಲಿನ ಭಾಗಗಳಾಗಿವೆ. ಉಡುಪಿಯಲ್ಲಿ ಕಾರ್ಕಳದವರೆಗೂ ಮಂಗಳೂರಿನಲ್ಲಿ ಪುತ್ತೂರು ಬಂಟ್ವಾಳದವರೆಗೂ ವಿಸ್ತರಿಸಲಾಗಿದೆ.

ಡಾ. ಕೆ.ವಿ. ರಮೇಶರವರ – ಆ ಹಿಸ್ಟರಿ ಆಫ್ ಸೌತ್ ಕೆನರಾ (1979) ಕೃತಿಯಲ್ಲಿ ಕರಾವಳಿ ಪ್ರದೇಶದ ಹುಟ್ಟು, ಬೆಳವಣಿಗೆ, ಹೋರಾಟಗಳು, ಸಂಸ್ಕೃತಿ, ಸಾಹಿತ್ಯ, ಸಾಮಾಜಿಕ, ಆರ್ಥಿಕ ಬೆಳವಣಿಗೆಗಳು, ಉದ್ಯೋಗಗಳು, ಗ್ರಾಮೀಣ ಕಸಬುಗಳು ಮಹಿಳೆಯರ ಸ್ಥಾನಮಾನಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಹಾಗೆಯೇ **ಡಾ. ಕೆ.ಜಿ. ವಸಂತ ಮಾಧವ ಅವರ ರಿಲಿಜಿಯನ್ಸ್ ಇನ್ ಕೋಸ್ಟಲ್ ಕರ್ನಾಟಕ 1500-1763 (1985)** ಕೃತಿಯು ಕರಾವಳಿ ಕರ್ನಾಟಕದ ಇತಿಹಾಸದ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುತ್ತದಷ್ಟೇ ಅಲ್ಲದೇ **ಡಾ. ಪಿ.ಬಿ. ದೇಸಾಯಿ ಮತ್ತು ಇತರರು ಸಂಪಾದಿಸಿ ರಚಿಸಿದ ದಿ ಹಿಸ್ಟರಿ ಆಫ್ ಕರ್ನಾಟಕ (1970)** ಈ ಕೃತಿಯಲ್ಲಿಯೂ ಈ ಪ್ರದೇಶದ ಬಗ್ಗೆ ಅಲ್ಲಲ್ಲಿ ಸೂಕ್ತವಾದ ಚರ್ಚೆಗಳು ದೊರೆಯುತ್ತದೆ. **ಡಾ. ಕೆ.ವಿ. ರಮೇಶ್‌ರವರ ತುಳುನಾಡಿನ ಇತಿಹಾಸ (1969)** ಕೂಡಾ

ಕನ್ನಡದಲ್ಲಿ ಈ ಪ್ರದೇಶದ ಬಗ್ಗೆ ರಚನೆಯಾಗಿರುವ ಐತಿಹಾಸಿಕ ಅಧ್ಯಯನವಾಗಿದೆ. ಇದರ ಜೊತೆಯಲ್ಲಿ **ಡಾ.ಕೆ.ವಿ. ರಮೇಶ್ ಮತ್ತು ಎಂ.ಜೆ. ಶರ್ಮರವರು ಸಂಪಾದಿಸಿದ ತುಳುನಾಡಿನ ಶಾಸನಗಳು ಸಂ–01 (1978) ಮತ್ತು ತುಳುನಾಡಿನ ಅರಸುಮನೆತನಗಳು (1985) ಈ ಕೃತಿಗಳು ವಸಹಾತುಶಾಹಿ ಕರಾವಳ ಕರ್ನಾಟಕದ ಬಗ್ಗೆ ಮಾಹಿತಿಯನ್ನು ನೀಡುತ್ತದೆ.**

ಕನ್ಯಾಕುಮಾರ ಪಿ. – ನಾಗರತ್ನಮ್ಮ ಎಸ್., 'ಕರ್ನಾಟಕದ ರಾಣಿಯರು' ಒಂದು ಸಮಗ್ರ ಅಧ್ಯಯನ (ಕದಂಬ ಸಾಮ್ರಾಜ್ಯದಿಂದ ವಿಜಯನಗರ ಸಾಮ್ರಾಜ್ಯದವರೆಗೆ) ಕ್ರಿ.ಶ. 345-1565.

ಪ್ರಾಚೀನ ಕಾಲದ ಸಾಮ್ರಾಜ್ಯದ ವೈಭವದಿಂದ ಕೂಡಿದ್ದು ಸುವರ್ಣಯುಗಗಳು ಸೃಷ್ಟಿಯಾಗಿದ್ದವು. ಈ ವೈಭವದ ಮಟ್ಟಕ್ಕೆ ಕೊಂಡೊಯ್ಯುವುದಕ್ಕೆ ಅರಸನೊಂದಿಗೆ ಇದ್ದ ರಾಣಿಯರ ಪಾತ್ರವು ಇಲ್ಲಿ ಸ್ಮರಣೀಯವಾದದ್ದು, ಇಲ್ಲಿ ರಾಣಿಯರು ಎಲೆಮರೆ ಕಾಯಿಯಂತೆ ಸಾಮ್ರಾಜ್ಯಕ್ಕೆ ತಮ್ಮ ಅಗಣ್ಯ ಸೇವೆ ಸಲ್ಲಿಸಿದ್ದಾರೆ. ಇವರಿಂದಲೇ ಸಾಕಷ್ಟು ದೇವಾಲಯಗಳ ನಿರ್ಮಾಣ, ಸಾರ್ವಜನಿಕ ಕಾರ್ಯಗಳು ಕೈಗೊಂಡಿರುವುದು ಇಲ್ಲಿ ಗಮನಾರ್ಹ. ಪುರುಷರಷ್ಟೇ ಅಲ್ಲದೇ ಮಹಿಳೆಯರು ಸಹ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಸಿಂಹಪಾಲನ್ನು ಪಡೆದಿದ್ದರೂ ಅಂಥವರ ಬಗ್ಗೆ ಎಲ್ಲೂ ಸ್ಪಷ್ಟವಾಗಿ ದಾಖಲೆಯಾಗಿಲ್ಲ. ಮಹಿಳೆಯರು ವೈವಿಧ್ಯಮಯವಾದ ಕರ್ನಾಟಕದ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಸಿಂಹಪಾಲನ್ನು ಪಡೆದಿದ್ದರೂ ಸಹ ಎಲ್ಲೂ ಸ್ಪಷ್ಟವಾಗಿ ದಾಖಲೆಯಾಗಿಲ್ಲ ಎಂಬುವುದರ ಬಗ್ಗೆ ಸ್ಪಷ್ಟವಾದ ವಿವರಣೆಯನ್ನು ಈ ಕೃತಿಯು ಒದಗಿಸುತ್ತದೆ.

* **ನಾಗರತ್ನಮ್ಮ ಎಸ್, ಕಲೆ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಮಹಿಳೆ**ಯರು ಕ್ರಿ.ಶ. 1565

ಪ್ರಾಚೀನ ರಾಜಮನೆತನಗಳು ತಮ್ಮಾಡಳಿತದ ಕಾಲದಲ್ಲಿ ದೇವಾಲಯ ಸ್ಮಾರಕಗಳನ್ನು ನಿರ್ಮಿಸಿರುವಂತೆ ರಾಣಿಯರು ದೇವಾಲಯಗಳನ್ನು, ಬಸದಿಗಳನ್ನು, ಸ್ಮಾರಕ ಮತ್ತು ಚೈತ್ಯಾಲಯಗಳನ್ನು, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಿರ್ಮಿಸಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ತಮ್ಮದೇ ಆದ ಬೃಹತ್ ಕೊಡುಗೆಗಳನ್ನು ನೀಡಿದ್ದಾರೆ. ಮಹಿಳೆಯರ ಸ್ಥಿತಿಗತಿಗಳನ್ನು ಲಿಂಗಸಂಬಂಧಿ ವ್ಯವಸ್ಥೆಗಳ ನೆಲೆಯಲ್ಲಿ ವಿವಿಧ ಆಯಾಮಗಳಲ್ಲಿ ಗ್ರಹಿಸುವ ಉದ್ದೇಶವನ್ನು ಮಹಿಳಾ ಅಧ್ಯಯನಗಳು ನಡೆಸುತ್ತಿವೆ. ಮಹಿಳೆಯರ ಆಸ್ಮಿತೆ, ಅಸ್ತಿತ್ವಗಳನ್ನು ಗುರುತಿಸುವ ಉದ್ದೇಶ ಮಹಿಳಾ ಸಂಶೋಧನೆಗಳಲ್ಲಿ ಸಾಗಿದೆ. ಸ್ತ್ರೀವಾದಿ ಸಂಶೋಧನೆಗೆ ಪ್ರತ್ಯೇಕವಾದ ವಿಧಾನಗಳನ್ನು ಮತ್ತು ವೈಧಾನಿಕತೆಯನ್ನು ರೂಪಿಸಿಕೊಳ್ಳುವ ಅಗತ್ಯವನ್ನು ಹಾಗೂ ಅದು ಎದುರಿಸಬೇಕಾಗಿರುವ ಸವಾಲುಗಳ ಕುರಿತು ವಿಶ್ಲೇಷಣೆಯನ್ನು ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯಲ್ಲಿ ನಡೆಯುತ್ತಿವೆ. ಮಹಿಳಾ ಸಬಲೀಕರಣದ ಸಾಧ್ಯತೆಯನ್ನು ಮಹಿಳೆಯರ ರಾಜಕೀಯ ಸಬಲೀಕರಣದ ನೆಲೆಗಳಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಈ ಕೃತಿಯಲ್ಲಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹಿಳೆಯರ ಅಪೂರ್ವ ಕೊಡುಗೆಗಳು ಮತ್ತು ಅವರ ಪಾತ್ರದ ಬಗ್ಗೆ ವಿವರವಾಗಿ ತಿಳಿಯಬಹುದಾಗಿದೆ.

ಹಲವು ಅಂಶಗಳಿಗೆ ಸಂಬಂಧಿಸಿದಂತೆ ದಾಖಲೆಗಳ ಅವಲೋಕನದ, ಪ್ರಮುಖರ ಸುರಚಿತ ಮಾಹಿತಿಗಳು ಗೆಜೆಟಿಯರ್‌ಗಳು, ಪತ್ರಗಾರರು, ಬರಹಗಳನ್ನು ಬಳಸಿಕೊಂಡು ಅಧ್ಯಾಯನದ ಮೌಲಿಕತೆಯನ್ನು ಅರ್ಥಪೂರ್ಣವಾಗಿಸುವಲ್ಲಿ ಶ್ರಮಿಸಬಹುದಾಗಿದೆ.

ಬಹುಮುಖ್ಯವಾಗಿರುವ ದೇಶಿಯ ಮೌಲಿಕ ಸಂಬಂಧಪಟ್ಟ ಬಹುಪಾಲು ಸಾಹಿತ್ಯ ಕೃತಿಗಳ ಜೊತೆಗೆ ವಿದೇಶಿ ಬರಹಗಾರರು ವಿಷಯಕ್ಕೆ ಸಂಬಂಧಿಸಿ ಬರೆದಿರುವ ಕೃತಿಗಳು ಸಂದರ್ಶನ ಬರಹಗಳು, ಸ್ವಾತಂತ್ರ್ಯಪೂರ್ವದಲ್ಲಿ ವಿದೇಶಿ ಬರಹಗಾರರು ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ವಸಹಾತುಶಾಹಿ ಕರಾವಳಿಯ ಭೂಪ್ರದೇಶಗಳು ಹಾಗೂ ಹಲವು ಸ್ಥಳಗಳ ಬಗ್ಗೆ ಬರೆದಿರುವ ಮ್ಯಾನುವೆಲ್‌ಗಳು, ದೇಶೀ ನಿಯತಾಲಿಕೆಗಳ ಮೂಲಕ ಒದಗಿಬರುವ ವಿಷಯಾಧಾರಿತ ಮಾಹಿತಿಗಳು ವಸಹಾತುಶಾಹಿ ಮಹಿಳೆಯರ ಪರಿವರ್ತನೆಗಳಿಗೆ ಸಂಬಂಧಿಸಿದಂತಹ ಲೇಖನಗಳು ಅಧ್ಯಯನಕ್ಕೊಂದು ಚೌಕಟ್ಟನ್ನು ಒದಗಿಸುತ್ತದೆ. ಇತರ ಎಲ್ಲಾ ಆಕರ ಮೂಲಗಳಿಂದ, ಕ್ಷೇತ್ರ ಅಧ್ಯಯನಗಳಿಂದ ಅಗತ್ಯವಿರುವ ಅಂಶಗಳನ್ನು ಮತ್ತು ಮಾಹಿತಿಗಳನ್ನು ಕ್ರೋಢೀಕರಿಸಿ ವಿಷಯಕ್ಕೆ ಸಂಬಂಧಿಸಿ ಉತ್ತಮ ಮಹಾಪ್ರಬಂಧವನ್ನು ರೂಪಿಸುವಲ್ಲಿ ಸಹಾಯಕವಾಗಿದೆ.

ಕರಾವಳಿ ಕರ್ನಾಟಕಕ್ಕೆ ಸಂಬಂಧಿಸಿದ ವೀರರ ಆರಾಧನೆ, ಜನಾಂಗೀಯ ಅಧ್ಯಯನಗಳು, ಜನಪದ ಸಾಹಿತ್ಯಗಳು, ಮೌಖಿಕ ಚರಿತ್ರೆಗೆ ಸಂಬಂಧಿಸಿದ ಅಧ್ಯಯನಗಳ ಕರಾವಳಿ ಕರ್ನಾಟಕದ ಇತಿಹಾಸದ ಬಗೆಗಿನ ಪರಿಜ್ಞಾನವನ್ನು ಶ್ರೀಮಂತಗೊಳಿಸಿವೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ ತನ್ನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಗೊಳಿಸಿದ ನಂತರ ಕರಾವಳಿ ಕರ್ನಾಟಕದ ಮೌಖಿಕ ಚರಿತ್ರೆ, ತಳಸುದಾಯ ಚರಿತ್ರೆ, ಸ್ಥಳೀಯ ಇತಿಹಾಸ ರಚನೆಗೆ ಸಾಕಷ್ಟು ಉತ್ತೇಜನ ಸಿಕ್ಕಿದೆಯಲ್ಲದೇ ಚರಿತ್ರೆಗೆ ಸಂಬಂಧಿಸಿದ ಹಲವಾರು ಸಂಶೋಧನಾ ಲೇಖನಗಳು, ಪ್ರಬಂಧಗಳು,ವೈಚಾರಿಕ ಗ್ರಂಥಗಳು ಪ್ರಕಾಶಿತಗೊಂಡಿವೆ. ಇವುಗಳು ಕರಾವಳಿ ಕರ್ನಾಟಕದ ಅದರಲ್ಲೂ ತುಳುನಾಡಿನ ಚರಿತ್ರೆಯ ವಿಭಿನ್ನ ಮಜಲುಗಳನ್ನು ಅನಾವರಣಗೊಳಸುವುದರ ಮೂಲಕ ಚರಿತ್ರೆಯ ಹರವನ್ನು ವಿಶ್ಲೇಷಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿವೆ.

<u>ಅಧ್ಯಯನದ ವ್ಯಾಪ್ತಿ</u> :

ಪ್ರಸ್ತುತ ಸಂಶೋಧನಾ ವಿಷಯವನ್ನು 1799 ರಿಂದ 1947ರ ಕಾಲಘಟ್ಟದಲ್ಲಿ ಅಧ್ಯಯನ ನಡೆಸಲು ನಿರ್ಧರಿಸಲಾಗಿದೆ. ವಾಸ್ತವಿಕವಾಗಿ ಈ ಕಾಲಾವಧಿಯು ಟಿಪ್ಪುವಿನ ಮರಣಾನಂತರ ಕರಾವಳಿ ಕರ್ನಾಟಕವು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಪ್ರಭುತ್ವಕ್ಕೆ ಒಳಪಟ್ಟ ಕಾಲಘಟ್ಟವಾಗಿದ್ದು, ಸ್ವಾತಂತ್ರ್ಯ ಹೋರಾಟವನ್ನು ಭಾರತ ರಾಷ್ಟ್ರೀಯ ಚಳುವಳಿಯ ಮೂರನೇ ಹಂತ ಅಥವಾ ಗಾಂಧಿಯುಗ ಎಂದೇ ಕರೆಯಲಾಗುತ್ತದೆ. ಕ್ರಿ.ಶ. 1885 ರಿಂದ 1905 ರವರೆಗಿನ ಕಾಲವನ್ನು ಪ್ರಥಮ

ಹಂತವೆಂತಲೂ 1906 ರಿಂದ 1919 ರವರೆಗಿನ ಕಾಲವನ್ನು ದ್ವಿತೀಯ ಹಂತವೆಂತಲೂ ನಿರ್ಧರಿಸಲಾಗಿದೆ.

ಕರಾವಳಿ ಕರ್ನಾಟಕವು ಕ್ರಿ.ಶ. 1800ರಲ್ಲಿ ರಚನೆಯಾಯಿತು. ಅದರ ಹಿಂದಿನ ವರ್ಷ ನಡೆದಿದ್ದ 4ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಮೈಸೂರಿಗೆ ಸೋಲಾಗಿ ಟಿಪ್ಪುವು ಶ್ರೀರಂಗಪಟ್ಟಣದಲ್ಲಿ ಮರಣಹೊಂದುತ್ತಾನೆ. ಬೊಂಬಾಯಿಂದ ಕನ್ಯಾಕುಮಾರಿವರೆಗಿನ ಪಶ್ಚಿಮ ಕರಾವಳಿ ಹಾಗೂ ಕನ್ಯಾಕುಮಾರಿ ಮದ್ರಾಸ್-ಕಲ್ಕತ್ತದವರೆಗಿನ ಪೂರ್ವ ಕರಾವಳಿ ಸಂಪೂರ್ಣವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳನ್ನು ರಚಿಸಿ ಮೊದಲನೆಯದನ್ನು ಬೊಂಬಾಯಿ ಪ್ರಾಂತ್ಯಕ್ಕೂ, ಎರಡನೇ ಮತ್ತು ಮೂರನೇಯದನ್ನು ಮದ್ರಾಸ್ ಪ್ರಾಂತ್ಯಕ್ಕೂ ಈಸ್ಟ್ ಇಂಡಿಯಾ ಕಂಪೆನಿಯ ಸರಕಾರ ಸೇರಿಸಿತು. ಹಾಗೆ ಕರಾವಳಿ ಕರ್ನಾಟಕದಲ್ಲಿ ಅಂದಿನಿಂದ ಬ್ರಿಟೀಷ್ ಸಾಮ್ರಾಜ್ಯದೊಳಗಿನ ಒಂದು ವಸಹಾತುವಾಗಿ ಮಾರ್ಪಾಟು ಹೊಂದಿತು.

ಕರಾವಳಿ ಕರ್ನಾಟಕದ 200 ವರ್ಷಗಳ ಚರಿತ್ರೆಯೆಂದರೆ 147 ವರ್ಷಗಳ ವಸಹಾತು ಪ್ರಭುತ್ವದ ಹಾಗೂ ಅದಕ್ಕೆ ವಿರುದ್ಧವಾದ ಹೋರಾಟಗಳ ಚರಿತ್ರೆ ಎನ್ನಬಹುದು. ಕೊನೆಯ 53 ವರ್ಷಗಳ ಇತಿಹಾಸವೆಂದರೆ ಸ್ವತಂತ್ರ್ಯ ಭಾರತದೊಳಗಿನ ಒಂದು ಜಿಲ್ಲೆಯಾಗಿ ಅಭಿವೃದ್ಧಿ ಸಾಧಿಸಿದ ಇತಿಹಾಸವಾಗಿದೆ. ಆದುದರಿಂದ ಪ್ರಸ್ತುತ ಅಧ್ಯಯನವನ್ನು ಒಟ್ಟು ಏಳು ಅಧ್ಯಯಗಳಾಗಿ ವಿಂಗಡಿಸಿಕೊಂಡು ಸಂಶೋಧನೆ ಮಾಡಲಾಗಿದೆ.

ಅಧ್ಯಾಯ - 1 : ಪೀಠಿಕೆ - ಭೌಗೋಳಿಕತೆ, ಸಾಂಸ್ಕೃತಿಕ ವಿಮರ್ಶೆ, ಸ್ವರೂಪ, ಉದ್ದೇಶ, ವ್ಯಾಪ್ತಿ, ಸಂಶೋಧನಾ ಮಾರ್ಗ ಮತ್ತು ಆಕರ ಗ್ರಂಥಗಳ ಪರಾಮರ್ಶೆ

ಅಧ್ಯಾಯ – 2 : ವಸಾಹತುಶಾಹಿ ಕರಾವಳಿ ಕರ್ನಾಟಕದ ಇತಿಹಾಸ. (ಕರಾವಳಿ ಕರ್ನಾಟಕದ ಪರಿಚಯ ಮತ್ತು ವಸಾಹತುಶಾಹಿ ಕರಾವಳಿ ಕರ್ನಾಟಕದ ಹಿನ್ನೆಲೆ)

ಅಧ್ಯಾಯ – 3 : ವಸಹಾತುಶಾಹಿ ಕರ್ನಾಟಕದ ಮಹಿಳೆಯರ ಸಾಮಾಜಿಕ ಪರಿವರ್ತನೆಗಳು ಮತ್ತು ಕರಾವಳಿ ಕರ್ನಾಟಕದ ಮಹಿಳಾ ಚಳುವಳಿಗಳು

ಅಧ್ಯಾಯ – 4 : ವಸಹಾತುಶಾಹಿ ಕರಾವಳಿ ಕರ್ನಾಟಕದ ಮಹಿಳೆಯರ ಶೈಕ್ಷಣಿಕ ಸ್ಥಾನಮಾನಗಳು

ಅಧ್ಯಾಯ –5 : ವಸಹಾತುಶಾಹಿ ಕರಾವಳಿ ಕರ್ನಾಟಕದ ಸಾಂಸ್ಕೃತಿಕ ವಿಶೇಷತೆಗಳು

ಅಧ್ಯಾಯ –6 : ವಸಹಾತುಶಾಹಿ ಕರಾವಳಿ ಕರ್ನಾಟಕದ ಮಹಿಳೆಯರ ಆರ್ಥಿಕ ಸ್ಥಾನಮಾನಗಳು

ಅಧ್ಯಾಯ –7 : ಉಪಸಂಹಾರ : ಸಂಶೋಧನೆಯಿಂದ ಹೊರಹೊಮ್ಮಿದ ತೀರ್ಮಾನಗಳು

ಛಾಯಾಚಿತ್ರಗಳು, ಅನುಬಂಧಗಳು, ಗ್ರಂಥಸೂಚಿ.

ಮೊದಲನೆ ಅಧ್ಯಾಯವು ಪೀಠಿಕಾ ರೂಪದಲ್ಲಿದ್ದು, ಸಂಶೋಧನೆಯ ಸ್ವರೂಪ, ಉದ್ದೇಶ, ವ್ಯಾಪ್ತಿ, ಸಂಶೋಧನೆಯಲ್ಲಿ ಅನುಸರಿಸಬಹುದಾದ ಸಂಶೋಧನಾ ಮಾರ್ಗ, ದೊರಕುವ ಚಾರಿತ್ರಿಕ,

ಆಧಾರಗಳು, ಪ್ರಮುಖವಾಗಿ ಲಭ್ಯವಿರುವ ಸಾಹಿತ್ಯಾಧಾರಗಳ ವಿಮರ್ಶೆ ಮೊದಲಾದವುಗಳನ್ನು ಕುರಿತು ಅಧ್ಯಯನ ನಡೆಸಲಾಗಿದೆ.

ಎರಡನೇಯ ಅಧ್ಯಾಯವು ಚಾರಿತ್ರಿಕ ಹಿನ್ನಲೆಯಲ್ಲಿ ಕರಾವಳಿ ಕರ್ನಾಟಕದ ಇತಿಹಾಸ ಮತ್ತು ಅದರಲ್ಲಿ ಕರಾವಳಿ ಕರ್ನಾಟಕದ ಇತಿಹಾಸದ ಪರಿಚಯ ಹಾಗೂ ವಸಾಹತು ಶಾಹಿ ಕರಾವಳಿ ಕರ್ನಾಟಕದ ಕುರಿತು ಚರ್ಚಿಸಲಾಗಿದೆ.

ಕರಾವಳಿ ಕರ್ನಾಟಕವು 1800ರಲ್ಲಿ ರಚನೆಯಾಯಿತು. ಕರಾವಳಿ ಕರ್ನಾಟಕವು ಭಾಗಗಳಾಗಿ ವಿಂಗಡನೆಯಾಗಿ ಪಶ್ಚಿಮ ಕರಾವಳಿ, ಪೂರ್ವ ಕರಾವಳಿಯೆಂದು ವಿಭಜನೆ ಹೊಂದಿ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಪ್ರಭುತ್ವಕ್ಕೆ ಒಳಪಟ್ಟವು ಅಲ್ಲದೇ ಅದಕ್ಕೂ ಮೊದಲು ಪೋರ್ಚುಗೀಸರು ಆಳ್ವಿಕೆಯನ್ನು ನಡೆಸಿರುವುದರ ಬಗ್ಗೆ, ಪೋರ್ಚುಗೀಸರ ಆಡಳಿತದ ನಂತರ ಕರಾವಳಿ ಕರ್ನಾಟಕವು ಯಾವ ರೀತಿಯಾಗಿ ವಸಾಹತು ಶಾಹಿ ಕರಾವಳಿ ಕರ್ನಾಟಕವಾಗಿ ರಚನೆಗೊಂಡಿತು ಎಂಬ ಚಾರಿತ್ರಿಕ ಇತಿಹಾಸದ ಬಗ್ಗೆ ಕೂಲಂಕೂಷವಾಗಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮೂರನೇಯ ಅಧ್ಯಯನವು ವಸಾಹತುಶಾಹಿ ಕರಾವಳಿ ಕರ್ನಾಟಕದ ಮಹಿಳೆಯರು ಸಾಮಾಜಿಕವಾಗಿ ತಮ್ಮ ಹಕ್ಕಿಗಾಗಿ ನಡೆಸಿದ ಹೋರಾಟ, ಮಹಿಳಾ ಪರಿವರ್ತನೆ, ಹರಿಜನ ಮಹಿಳೆಯರ ಸ್ಥಿತಿಗತಿಗಳು ಮತ್ತು ಮಹಿಳಾ ಶೋಷಣೆಗಳ ಹಿನ್ನಲೆಯಲ್ಲಿ ಅಧ್ಯಯನವನ್ನು ನಡೆಸಲಾಗಿದೆ.

ನಾಲ್ಕನೇಯ ಅಧ್ಯಾಯವು ಕರಾವಳಿ ಕರ್ನಾಟಕದ ವಸಾಹತು ಶಾಹಿ ಕಾಲದಲ್ಲಿ ಆದಂತಹ ಶೈಕ್ಷಣಿಕ ಬದಲಾವಣೆಗಳು ಮತ್ತು ಇದರಿಂದ ಮಹಿಳೆಯರ ಮೇಲೆ ಆದಂತಹ ಪರಿಣಾಮಗಳು, ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯು ಮತ್ತು ಸಾಮಾಜಿಕ ಸುಧಾರಕರು ಮಹಿಳಾ ಶಿಕ್ಷಣಕ್ಕೆ ನೀಡಿದ ಪ್ರಾಮುಖ್ಯತೆಗಳು ಹಾಗೂ ಮಹಿಳಾ ಶಿಕ್ಷಣದಲ್ಲಿ ಅದಂತಹ ಬದಲಾವಣೆಗಳ ಬಗ್ಗೆ ಚರ್ಚಿಸಲಾಗಿದೆ.

ಐದನೇಯ ಅಧ್ಯಾಯನವು ವಸಹಾತುಶಾಹಿ ಕರಾವಳಿ ಕರ್ನಾಟಕದ ಮಹಿಳೆಯರ ಸಾಂಸ್ಕೃತಿಕವಾಗಿ ಯಾವ ರೀತಿಯ ಬದಲಾವಣೆಗಳನ್ನು ಹೊಂದಿದ್ದಾಳೆ. ಮಹಿಳೆಯರ ಜೀವನಮಟ್ಟ, ಜೀವನಶೈಲಿ, ಆಚಾರ ವಿಚಾರಗಳು, ಸಂಪ್ರದಾಯಗಳು, ಸಾಹಿತ್ಯ ಮತ್ತು ಲಲಿತಕಲಾ ರಂಗದಲ್ಲಿ ಮಹಿಳೆಯರ ಸಾಹಿತದಯ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಗೌರವ ಮುಂತಾದವುಗಳ ಕುರಿತು. ಪರೀಕ್ಷಿಸಲಾಗಿದೆ.

ಆರನೇಯ ಅಧ್ಯಾಯನದಲ್ಲಿ ವಸಹಾತು ಕರಾವಳಿ ಕರ್ನಾಟಕದ ಮಹಿಳೆಯರ ಆರ್ಥಿಕ ಪರಿಸ್ಥಿತಿಯು ಯಾವ ರೀತಿಯಾಗಿತ್ತು ? ಮಹಿಳೆಯು ಆರ್ಥಿಕವಾಗಿ ಯಾವ ರೀತಿಯ ಸ್ಥಾನಮಾನವನ್ನು

ಪಡೆಯುತ್ತಿದ್ದಳು. ಮಹಿಳಾ ಉದ್ಯೋಗ, ಗ್ರಾಮೀಣ ಕಸುಬುಗಳು, ಗೃಹ ಕೈಗಾರಿಕೆಗಳು, ಕುಶಲಕಲೆಗಳು ಮೊದಲಾದವುಗಳನ್ನು ಕೇಂದ್ರೀಕರಿಸಿಕೊಂಡು ಮಹಿಳೆಯರ ಅಭಿವೃದ್ಧಿಯ ಸಾಧನೆಗಳು ಮತ್ತು ಕರಾವಳಿ ಕರ್ನಾಟಕದಲ್ಲಿ ಮಹಿಳಾ ಚಳುವಳಿಗಳು ಹಾಗೂ ಸಾಮಾಜಿಕ ಸುಧಾರಣಾ ಚಳುವಳಿಗಳ ಕುರಿತಾಗಿ ಚರ್ಚಿಸಲಾಗಿದೆ.

ಏಳನೇಯ ಅಧ್ಯಾಯನವು ಸಂಶೋಧನೆಯಿಂದ ಹೊರಹೊಮ್ಮಿದ ತೀರ್ಮಾನಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಗಿದೆ. ಜೊತೆಗೆ ಛಾಯಾಚಿತ್ರಗಳು ಅನುಬಂಧಗಳು ಗ್ರಂಥಸೂಚಿ ಮುಂತಾದವುಗಳನ್ನು ಸಂಗ್ರಹಿಸಿಕೊಡಲಾಗಿದೆ. ಇದರೊಂದಿಗೆ ಉಪಸಂಹಾರವನ್ನು ಕೂಡಾ ಒಳಗೊಂಡಿದೆ.

ಸಂಶೋಧನಾ ಚಟುವಟಿಕೆಗಳ ವಿವರ:

ಈ ಅವಧಿಯಲ್ಲಿ ನನ್ನ ಪಿ.ಹೆಚ್.ಡಿ. ಅಧ್ಯಯನಕ್ಕೆ ಪೂರಕವಾಗಿ ನಾನು ಇದುವರೆಗೆ ನಡೆಸಿರುವ ಸಂಶೋಧನಾ ಲೇಖನಗಳನ್ನು ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯ ಮಟ್ಟದ ವಿಚಾರ ಸಂಕೀರ್ಣಗಳಲ್ಲಿ ಮಂಡಿಸಿರುತ್ತೇನೆ. ಹಾಗೂ ಎರಡು ಸಂಶೋಧನಾ ಲೇಖನಗಳನ್ನು ಐಎಸ್‌ಬಿಎನ್ ನಂಬರಿನ ಪುಸ್ತಕಗಳಲ್ಲಿ ಪ್ರಕಟಣೆ ಮಾಡಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಕೆಳಗಡೆ ನೀಡಲಾಗಿದೆ.

- ಫೆಬ್ರವರಿ 14, 2019 ರಂದು ಸರಕಾರಿ ಪ್ರಥಮದರ್ಜೆ ಕಾಲೇಜು, ದೇವನಹಳ್ಳಿ, ಬೆಂಗಳೂರು ಇಲ್ಲಿ ನಡೆದ 'Women in Transition Achievements, Issues and Challenges' ವಿಷಯದ ಮೇಲೆ ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ಭಾಗವಹಿಸಿರುತ್ತೇನೆ ಮತ್ತು 15, 2019 ರಂದು ಅದೇ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಸಮ್ಮೇಳನದಲ್ಲಿ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧಿಕರಣ' ಎಂಬ ವಿಷಯದ ಬಗ್ಗೆ ವಿಚಾರವನ್ನು ಮಂಡಿಸಿರುತ್ತೇನೆ.

  ಪ್ರಮೀಳಾ ಎಮ್, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧಿಕರಣ, 2019, ISBN No: 978-93-5351-086-2, Page No: 175-176

- ಜುಲೈ 14, 2019 ರಂದು ಶ್ರೀನಿವಾಸ್ ಯೂನಿರ್ವಸಿಟಿ, ಮಂಗಳೂರು ಇಲ್ಲಿ ನಡೆದ 'Issues and Challenges in Teacher Education' ವಿಷಯದ ಮೇಲೆ ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ಭಾಗವಹಿಸಿರುತ್ತೇನೆ ಮತ್ತು ಅದೇ ದಿನ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಸಮ್ಮೇಳನದಲ್ಲಿ 'ಶಿಕ್ಷಣ ಮತ್ತು ಮಹಿಳಾ ಸಬಲೀಕರಣ' ಎಂಬ ವಿಷಯದ ಬಗ್ಗೆ ವಿಚಾರವನ್ನು ಮಂಡಿಸಿರುತ್ತೇನೆ.

  ಪ್ರಮೀಳಾ ಎಮ್, 'ಶಿಕ್ಷಣ ಮತ್ತು ಮಹಿಳಾ ಸಬಲೀಕರಣ', Contemporary Issues and Challenges of Teacher Education, 2019, ISBN No: 978-93-94676-06, Page No: 57-63

- ದಿನಾಂಕ 14.09.2019 ರಂದು ಮಂಗಳೂರು ವಿಶ್ವವಿದ್ಯಾನಿಲಯ ದೂರ ಶಿಕ್ಷಣದ ಬಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ ಒಂದು ದಿನದ "Maxims of Teaching and Specific Objectives of Teaching" ಎಂಬ ವಿಷಯದ ಬಗ್ಗೆ ವಿಶೇಷ ಕಾರ್ಯಾಗಾರವನ್ನು ನಡೆಸಿಕೊಟ್ಟಿರುತ್ತೇನೆ.

- ದಿನಾಂಕ 11.05.2019 ರಂದು ಮಂಗಳೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣದ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗೆ ಒಂದು ದಿನದ **"ಪಠ್ಯಗಳ ಓದುವಿಕೆ ಮತ್ತು ಪ್ರತಿಫಲನಾತ್ಮಕ ಚಿಂತನೆಯ"** ಬಗ್ಗೆ ವಿಶೇಷ ಕಾರ್ಯಾಗಾರವನ್ನು ನಡೆಸಿಕೊಟ್ಟಿರುತ್ತೇನೆ.

ನನ್ನ ಸಂಶೋಧನೆಯಿಂದ ಹೊರಹೊಮ್ಮಿದ ತೀರ್ಮಾನಗಳು:

ಸಾಮಾಜಿಕ ನಿಯಮಾವಳಿಯನ್ನು ಕಾಯ್ದುಕೊಳ್ಳುವಲ್ಲಿ, ಸಂವಹನವನ್ನು ಮನದಟ್ಟಾಗಿಸಿ, ನಿರಂತರ ಗೊಳಿಸುವಲ್ಲಿ ಗಾದೆ, ಒಗಟುಗಳು ವಿಶೇಷವಾದ ಪಾತ್ರವನ್ನು ವಹಿಸುತ್ತವೆ. ಲಿಂಗ ಪಾವಿತ್ರ್ಯದ ವಿರಚನೆಯ ಸಾಧ್ಯತೆಯಾಗಿ ಗಾದೆ ಒಗಟುಗಳ ರಚನೆ ಮತ್ತು ಬಳಕೆ ಆಗಬೇಕಾಗಿದೆ. ಮಾತೃರೂಪಿ ಕರಾವಳಿ ಸಂಸ್ಕೃತಿಯಲ್ಲಿನ 'ಒಂದು ಹೆಣ್ಣು ಹೆಣ್ಣಲ್ಲಿ, ಒಂದು ಕಣ್ಣು ಕಣ್ಣಲ್ಲಿ' ಎನ್ನುವಂತಹ ಗಾದೆಗಳು ಹುಟ್ಟಿದಾಗ ಲಿಂಗಪ್ರಭೇದದ ನಿರಚನೆಯಾಗುತ್ತದೆ. ಹೆಣ್ಣಿಗೆ ಇತಿಹಾಸ, ಪರಂಪರೆ ಇಲ್ಲ ಎನ್ನುವ ಪುರುಷ ನಿರ್ವಚನದ 'ಸ್ತ್ರೀ ಶೂನ್ಯ'ಕ್ಕೆ ಬದಲಾಗಿ ಮಾತೃರೂಪಿ ಮೌಖಿಕ ಲೋಕದ ಹೆಣ್ಣುತನದ ಪ್ರಕಟನೆ ಹೊಸ ಸತ್ಯವನ್ನು ಕಾಣಿಸುತ್ತದೆ. ದಕ್ಷಿಣ ಕನ್ನಡದ ಜನಪದ ಸಾಹಿತ್ಯಿಕ ಪಠ್ಯಗಳ ಹಿನ್ನಲೆಯಲ್ಲಿ ಸ್ತ್ರೀಶಕ್ತಿ ಕೇಂದ್ರಗಳಲ್ಲಿ ಶೋಧಿಸಿ ಅದು ಒದಗಿಸುವ ಮಾಹಿತಿಯ ಮರು ವ್ಯಾಖ್ಯಾನದಲ್ಲಿ ಸ್ತ್ರೀತ್ವದ ಹೊಸ ಸಂಕಥನವನ್ನು ಇಲ್ಲಿ ರೂಪಿಸಲಾಗಿದೆ. ಪಶ್ಚಿಮದ ಪರಿಕಲ್ಪನೆಯಂತೆ ಭೌತಿಕ ರಾಜಕಾರಣದಲ್ಲಿ ವಿವರಿಸಿಕೊಳ್ಳುವುದು ನಮ್ಮ ಸಂದರ್ಭದ ಹೆಣ್ಣುತನವನ್ನು ಮತ್ತೆ ಅಪಾರ್ಥಗೊಳಿಸುವ, ಅದೃಶ್ಯಗೊಳಿಸುವ ಕಾರ್ಯವಾದೀತು ಎನ್ನುವ ಅಪಾಯದ ಎಚ್ಚರದಲ್ಲಿ ಭಾರತೀಯ ಸ್ತ್ರೀತನವನ್ನು ಕಟ್ಟುವ ಚಿಂತನೆಗೆ ನಾವು ಮೌಖಿಕ ಜಗತ್ತಿನ ಅರಿವು ಮೂಡಿಸಬೇಕು. ಮೌಖಿಕ ಕಾವ್ಯ ಪುರಾಣಗಳ ವ್ಯಕ್ತಿಗಳು ಸಮುದಾಯದ ಸಾಂಸ್ಕೃತಿಕ ಜಗತ್ತಿನಲ್ಲಿ, ಮಾನಸಿಕ ಲೋಕದಲ್ಲಿ, ಆಚರಣಾತ್ಮಕ, ಭೂಮಿಯೊಳಗೆ ಮತ್ತೆ ಜೀವಂತವಾಗಿ ವರ್ತಮಾನಕ್ಕೆ ಬಂದು ತಮ್ಮ ಜನ ಸಮುದಾಯದೊಂದಿಗೆ ಬದುಕುತ್ತಾರೆ. ಇದು ಮೌಖಿಕ ಪರಂಪರೆಯ ಅಪೂರ್ವ ದರ್ಶನ. ಹಾಗಾಗಿಯೇ ಯಾವುದೇ ಜನಪದ ಕಾವ್ಯ ಪುರಾಣಗಳು ಜನ ಬದುಕಿನ ಸೃಜನಶೀಲ ಕಥನ. ಹೀಗೆ ಸಂಸ್ಕೃತಿಯೊಳಗಿನ ಚೈತನ್ಯ ನೆಲೆಯನ್ನು, ಶಕ್ತಿ ಕೇಂದ್ರಗಳನ್ನು ನೋಡುವ ಮತ್ತು ಕಟ್ಟುವ ನೋಟ ಜನಪದ ಸಾಹಿತ್ಯವನ್ನು ನೋಡುವ ನಮ್ಮ ಗ್ರಹಿಕೆಯ ದೃಷ್ಟಿಗಿರಬೇಕು.

ಲೇಖಕಿಯರ ಬರಹಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಸಾಹಿತ್ಯ ಸೃಷ್ಟಿಯ ವಿಫಲತೆಗೆ ಉದ್ಯೋಗ, ಸಾಹಿತ್ಯ ಮತ್ತು ಕೌಟುಂಬಿಕ ಜವಾಬ್ದಾರಿಗಳ ಮೂರು ದೋಣಿಗಳಲ್ಲಿ ಏಕ ಕಾಲದಲ್ಲಿ ಪಯಣಿಸಬೇಕಾದ ಒತ್ತಡಗಳು ಮಹಿಳೆಯರ ಸಾಹಿತ್ಯದ

ಆಸಕ್ತಿಯ ಏರಿಳಿತಗಳಿಗೆ ಕಾರಣವಾಗಿಲ್ಲ ಎಂಬ ಅಂಶ ಅರಿವಿಗೆ ಬರುತ್ತದೆ. ಕವಯಿತ್ರಿಯರಿಗೆ ಕಾವ್ಯೋದ್ಯೋಗದ ಪರಿಸರವಿಲ್ಲ. ಕಾವ್ಯ ಭಾಷೆಯ ಬಗ್ಗೆ ತಿಳಿ ಹೇಳುವಂಥ ಶೈಕ್ಷಣಿಕ ವಾತಾವರಣವಿಲ್ಲ ಎಂಬುದು ವಾಸ್ತವವಾಗಿದ್ದರೂ, ಅವರಿಗೆ ಕೃತಿಗಳ ರಚನೆಯಲ್ಲಿ ಇರುವ ಆಸಕ್ತಿ ವಿವರ್ಶಿಯ ಕುರಿತಂತೆ ಕಾಣಿಸಿಕೊಳ್ಳುವುದಿಲ್ಲ. ಲೇಖಕಿಯರಿಗೆ ತಮ್ಮ ಅನುಭವಗಳನ್ನು ಸಂವೇದನೆಗಳನ್ನು ಹೇಳಿಕೊಳ್ಳುವ ತುರ್ತಿನ ಆಳದಲ್ಲಿ ಸಾಹಿತ್ಯ ಅಧ್ಯಯನ, ನಿರಂತರ ಓದುವಿಕೆ ಕೊರತೆ ನಿಚ್ಚಳವಾಗಿದೆ. ಲೇಖಕಿಯರ ಬರವಣಿಗೆಯ ಎಲ್ಲಾ ನೆಲೆಗಳಲ್ಲಿ ಅಂದರೆ ಭಾಷೆ ವಸ್ತು, ನಿರೂಪಣಾ ಕ್ರಮದಲ್ಲಿ ಸಾಹಿತ್ಯ ಪ್ರಕಾರಗಳ ಸಿದ್ಧ ಸವಕಳಿ ಮಾಧ್ಯಮವನ್ನೇ ಮತ್ತೆ ಮತ್ತೆ ಕಂಡುಕೊಳ್ಳುತ್ತಾರೆಯೇ ಹೊರತು, ಅವರದೇ ಆದ ನಾವಿನ್ಯತೆಯ ಛಾಪನ್ನು ಬರವಣಿಗೆಯಲ್ಲಿ ಹುಡುಕುವ ಪ್ರಯತ್ನವನ್ನು ಮಾಡುತ್ತಿಲ್ಲ. ಸಾಹಿತ್ಯಿಕ ಚರ್ಚೆ, ಗೋಷ್ಠಿ, ಸಂವಾದಗಳಲ್ಲಿ ಲೇಖಕಿಯರು ಆಸಕ್ತಿಯಿಂದ ಪಾಲ್ಗೊಳ್ಳುವುದಿಲ್ಲ. ತಮ್ಮ ಕುಂದುಕೊರತೆಗಳನ್ನು ಅಸಫಲತೆಯನ್ನು ಮನವರಿಕೆ ಮಾಡಿಕೊಳ್ಳುವುದು ಅವರಿಗೆ ಅಷ್ಟಾಗಿ ಮುಖ್ಯವಾಗಿಲ್ಲ. ಅನುಕೂಲತೆಗಳು ಸೌಲಭ್ಯಗಳು ಹೆಚ್ಚಿದ್ದರೂ ಸಾಹಿತ್ಯ ರಚನೆಯ ಜವಾಬ್ದಾರಿಯನ್ನು ಗಂಭೀರವಾಗಿ ಪರಿಗಣಿಸದಿರುವುದು ಅವರ ವೈಫಲ್ಯಕ್ಕೆ ಕಾರಣವಾಗಿದೆ ಎಂದು ಹೇಳಬೇಕಾಗುತ್ತದೆ.

ಕರಾವಳಿ ಕರ್ನಾಟಕವು ಕ್ರಿ.ಶ. 1800ರಲ್ಲಿ ರಚನೆಯಾಯಿತು. ಬೊಂಬಾಯಿಯಿಂದ ಕನ್ಯಾಕುಮಾರಿವರೆಗಿನ ಪಶ್ಚಿಮ ಕರಾವಳಿ ಹಾಗೂ ಕನ್ಯಾಕುಮಾರಿಯಿಂದ ಮದ್ರಾಸ್–ಕಲ್ಕತ್ತದವರೆಗಿನ ಪೂರ್ವ ಕರಾವಳಿ ಸಂಪೂರ್ಣವಾಗಿ ಬ್ರಿಟಿಷ್ ಈಸ್ಟ ಇಂಡಿಯಾ ಕಂಪೆನಿಯ ಪ್ರಭುತ್ವಕ್ಕೆ ಒಳಪಟ್ಟವು. ಪಶ್ಚಿಮ ಕರಾವಳಿಯಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳನ್ನು ರಚಿಸಿ ಮೊದಲನೆಯದನ್ನು ಬೊಂಬಾಯಿ ಪ್ರಾಂತ್ಯಕ್ಕೂ ಎರಡನೆ ಮತ್ತು ಮೂರನೆಯವುಗಳನ್ನು ಮದ್ರಾಸ್ ಪ್ರಾಂತ್ಯಕ್ಕೂ ಈಸ್ಟ್ ಇಂಡಿಯಾ ಕಂಪೆನಿ ಸರಕಾರ ಸೇರಿಸಿತು. ಹಾಗೆ ದಕ್ಷಿಣ ಕನ್ನಡ ಜಿಲ್ಲೆಯು ಅಂದಿನಿಂದ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಒಂದು ವಸಾಹತಾಗಿ ಮಾರ್ಪಾಟು ಹೊಂದಿತು.

* ಟಿಪ್ಪುವಿನ ಮರಣಾನಂತರ ಬ್ರಿಟಿಷ್ ಈಸ್ಟ ಇಂಡಿಯಾ ಕಂಪೆನಿಯ ಅಧೀನಕ್ಕೆ ಒಳಪಟ್ಟ ನಂತರ ಕರಾವಳಿ ಕರ್ನಾಟಕವು ಹೊಸ ಸಾಂಸ್ಕೃತಿಕ ಪರಂಪರೆ ಉದಯವಾಗಲು ಕಾರಣವಾಯಿತು.

* ಕರಾವಳಿ ಭಾಗವು ಭೌಗೋಳಿಕವಾಗಿ, ಸಾಹಿತ್ಯಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕ ವಿಚಾರಗಳಲ್ಲಿ ವೈವಿಧ್ಯತೆಯನ್ನು ಸದೃಢಗೊಳಿಸಿರುವುದನ್ನು ಕಾಣಬಹುದಾಗಿದೆ. ಈ ವೈವಿಧ್ಯತೆಯ ಸಾಂಸ್ಕೃತಿಕ ಸೊಗಡಿನಿಂದ ಕೂಡಿದ್ದು ವಸಾಹತು ಶಾಹಿ ಕಾಲಘಟ್ಟದಲ್ಲಿನ ಆಚಾರ-ವಿಚಾರ, ಉಡುಗೆ-ತೊಡುಗೆ, ಭಾಷೆ ನಡೆ-ನುಡಿ ಜೀವನ ಕ್ರಮ ಮತ್ತು ರೂಢಿ

ಸಂಪ್ರದಾಯಗಳಲ್ಲಿ ಮಹತ್ತರವಾದ ವ್ಯತ್ಯಾಸ ಹಾಗೂ ಬದಲಾವಣೆಗಳನ್ನು ಕಂಡುಕೊಂಡಿತು.

* ಸ್ವಾತಂತ್ರ್ಯ ಪೂರ್ವದಲ್ಲಿ ಚರಿತ್ರೆಯನ್ನು ತಿರುವಿ ನೋಡಿದರೆ ಪ್ರಾಚೀನ ಭಾರತದ ಮಹಿಳೆಯರಿಗೂ ಸಮಾನ ಅವಕಾಶಗಳಿದ್ದವು. ಪತಂಜಲಿ, ಕತ್ಯಾಯಾಯನರ ಪ್ರಕಾರ ಮಹಿಳೆಯರು ವಿದ್ಯಾವಂತರಾಗಿ ತಕ್ಕ ಸಮಯಕ್ಕೆ ಮದುವೆಯಾಗಿ ಅದರಲ್ಲೂ ತಮ್ಮ ಮನಸ್ಸಿಗೆ ಒಪ್ಪುವ ವರನನ್ನು ಪಡೆಯುವ ಅವಕಾಶವನ್ನು ಪಡೆದುಕೊಂಡಿದ್ದರು.

* ಮುಂದೆ ಆಧುನಿಕ ಶಿಕ್ಷಣದಿಂದ ಕ್ರಾಂತಿಕಾರಿ ಚಳುವಳಿಗಳು ನಡೆದು ಮಹಿಳೆಯ ಸ್ಥಾನದಲ್ಲಿ ಬದಲಾವಣೆ ಕಂಡು ಬಂದು ಮಹಿಳೆಯು ಕೂಡಾ ಸಮಾಜದಲ್ಲಿ ಉತ್ತಮವಾಗಿ ಗೌರವಿಸಲ್ಪಟ್ಟ ಸಮಾನ ಅವಕಾಶಗಳನ್ನು ಪಡೆಯುವುದನ್ನು ಕಾಣುತ್ತೇವೆ. ಇದಕ್ಕೆ ನಿರಂತರವಾದ ಹೋರಾಟವನ್ನು ಮಹಿಳೆಯರೇ ಮಾಡುವುದು ಶೋಚನೀಯ ವಿಚಾರವಾಗಿದೆ.

* ಮೊಟ್ಟ ಮೊದಲು ಶಿಕ್ಷಣ ಸಂಸ್ಥೆಗಳು ಈ ಭಾಗದಲ್ಲಿ ಆರಂಭವಾಯಿತು. ಇದು ಬ್ರಿಟಿಷ್ ಅಧಿಕಾರಿಗಳ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಉದ್ದೇಶವನ್ನು ಹೊಂದಿದ್ದವು.

* 1972 ರಲ್ಲಿ ಕಾಸರಗೋಡನ್ನು ಕೇರಳದಲ್ಲಿ ಸೇರಿಸಲಾಯಿತು. 1997 ರಲ್ಲಿ ಉಡುಪಿ ಜಿಲ್ಲೆಯನ್ನು ದೊಡ್ಡ ದಕ್ಷಿಣಕನ್ನಡ ಜಿಲ್ಲೆಯಿಂದ ಬೇರ್ಪಡಿಸಿ ಹೊಸ ಜಿಲ್ಲೆಯನ್ನು ರಚಿಸಲಾಯಿತು. ಮಂಗಳೂರು ಪ್ರಮುಖ ಬಂದರಾಗಿ, ವ್ಯಾಪಾರ ಕೇಂದ್ರವಾಗಿ ಮಾರ್ಪಟ್ಟಿತು.

* ಮಹಿಳೆಯರ ಸಾಮಾಜಿಕ ಸ್ಥಾನಮಾನದಲ್ಲಿ ನೋಡುವುದಾದರೆ

- ಹೆಣ್ಣು ಹೇಗಿದ್ದರೂ 'ಪರನೊಡವೆಯಲ್ಲವೆ?' ಅವಳು ಎಂದಿದ್ದರೂ ಮನೆಯನ್ನು ಬಿಟ್ಟು ಹೋಗುವವಳು.
- ಮನೆಯಲ್ಲಿದ್ದು ತಮ್ಮ ದುಡಿಮೆಯಿಂದ ತಾಯಿ-ತಂದೆಯನ್ನು ಪೋಷಿಸುವುದು ಗಂಡು ಮಕ್ಕಳು.
- ಹೆಣ್ಣು ಮನೆಯಲ್ಲಿರುವವರೆಗೆ ರಕ್ಷಣೀಯಳು. ಮದುವೆಯಾದ ಮೇಲೆ ಅವಳು ವಿಧವೆಯಾಗುವ, ಸಹಗಮನವನ್ನು ಮಾಡುವ ಭಯವು ತಾಯಿ-ತಂದೆಗೆ ಇದ್ದೇ ಇರುತ್ತಿತ್ತು.
- ತಮ್ಮ ಸಾವಿನ ನಂತರ ತಮಗೂ ತಮ್ಮ ಪಿತೃಗಳಿಗೂ ಪಿಂಡವನ್ನು ಹಾಕುವ ಅಧಿಕಾರ ಪುತ್ರನಿಗೆ ಮಾತ್ರ. ಅಲ್ಲದೇ ತಂದೆ ಮಾಡಿದ ಧರ್ಮವನ್ನು ಕಾಪಾಡಿಕೊಂಡು ಬರುವವನೇ ಗಂಡು ಮಗ. ಇಂತಹ ಅನೇಕ ಸಾಮಾಜಿಕ ಕರಾವಳಿ ಕರ್ನಾಟಕದ ಭಾಗದ

ಆದರ್ಶ ಸಂಸಾರದಲ್ಲಿ ಒಳ್ಳೆಯ ಹೆಂಡತಿಗೂ ಒಳ್ಳೆಯ ಸೊಸೆಗೂ ಸ್ಥಾನವಿದ್ದರೂ 'ಮಗಳು' ಎನ್ನುವವಳು ಬಯಸಿ ಪಡೆಯಬೇಕಾದ ಮಗುವಾಗಿರಲಿಲ್ಲ.

* ಕರಾವಳಿ ಕರ್ನಾಟಕದಲ್ಲಿ ಇತ್ತೀಚಿನವರೆಗೂ ಅಳಿಯ ಸಂತಾನದ ಪ್ರಕಾರ ಆಸ್ತಿ ಮಗಳಿಗೆ ಸೇರುತ್ತದೆ.

* ಕರಾವಳಿ ಕರ್ನಾಟಕದ ಶೈಕ್ಷಣಿಕ ಪ್ರಗತಿಯು 1886-1926 ರ ಅವಧಿಯಲ್ಲಿ ತೀರಾ ನಿಧಾನಗತಿಯಲ್ಲಿದ್ದು 1834 ರಲ್ಲಿ ಜರ್ಮನ್ ಮಿಷನರಿಗಳು ಸ್ವಿಟ್ಜರ್ ಲ್ಯಾಂಡನ್ನು ಬಿಟ್ಟು ಮಂಗಳೂರಿನಲ್ಲಿ ನೆಲೆಯೂರಿ ಇಲ್ಲಿನ ಜನರ ಕಾರ್ಯ, ಭಾಷೆ, ಸಂಸ್ಕೃತಿಯಲ್ಲಿ ಬದಲಾವಣೆ ತಂದರು.

* ಅಂದಿನ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ತಮ್ಮ ವಿಚಾರಗಳನ್ನು ಮಂಡಿಸಲು ಅವಕಾಶಾಗಳು ಇರಲಿಲ್ಲ. ಕೆಲವು ಮುಖ್ಯ ನಿರ್ಧಾರಗಳನ್ನು ಕೈಗೊಳ್ಳುವಾಗಲೂ ಮಹಿಳೆಯರಿಗೆ ಮುಖ್ಯ ಅನಿಸಿಕೆಗಳನ್ನು ಮಂಡಿಸಲು ಅವಕಾಶವಿರಲಿಲ್ಲ. ಮಹಿಳೆಯರು ಹಲವಾರು ರೀತಿಗಳಲ್ಲಿ ಪುರುಷರಿಂದ ದಬ್ಬಾಳಿಕೆಗೆ ಒಳಪಡುತ್ತಿದ್ದುದನ್ನು ಅರಿತ ಕ್ರೈಸ್ತ ಮಿಷನರಿಗಳು ಹಲವೆಡೆ, ಶಾಲೆಗಳು, ಆಸ್ಪತ್ರೆಗಳು, ಕಾರ್ಖಾನೆಗಳು, ಅನಾಥಾಲಯಗಳು, ವೃದ್ಧಾಶ್ರಮ ಹಾಗೂ ಇನ್ನಿತರ ಸಂಸ್ಥೆಗಳನ್ನು ಸ್ಥಾಪನೆ ಮಾಡಲಾಯಿತು.

- 1943 ರ ಎಸ್.ಎಸ್.ಎಲ್.ಸಿ.ಯಲ್ಲಿ 46 ವಿದ್ಯಾರ್ಥಿನಿಯರೊಂದಿಗೆ ಪ್ರಾರಂಭವಾದ ಶಾಲೆಯಲ್ಲಿ ಪ್ರಥಮ ಗುಂಪಿನ ವಿದ್ಯಾರ್ಥಿನಿಯರು ಶೇಕಡಾ 100 ಫಲಿತಾಂಶದೊಂದಿಗೆ ತೇರ್ಗಡೆಯಾದರು. ಇದರಿಂದ ಮಹಿಳಾ ಶಿಕ್ಷಣದ ಅವಶ್ಯಕತೆಯ ಅರಿವು ಎಲ್ಲರಲ್ಲಿಯೂ ಜಾಗೃತಿಯನ್ನು ಮೂಡಿಸಿತು ಎಂದು ಹೇಳಬಹುದು.

- ಮಹಿಳೆಯರು ಮನೆಯಿಂದ ಹೊರಗೆ ಬಂದು ಸಮಾಜವನ್ನು ಎದುರಿಸಬೇಕು, ಶಿಕ್ಷಣದ ಹಕ್ಕನ್ನು ಪಡೆಯಬೇಕೆಂದು, ಮಹಿಳೆಯರಿಗೆ ವಿದ್ಯಾಭ್ಯಾಸ ಅತ್ಯಂತ ಅಗತ್ಯ ಎಂದು ಸುಬ್ಬರಾಯ ಪೈಗಳು 1894 ರಲ್ಲಿ ಸ್ತ್ರೀ ಶಿಕ್ಷಣಕ್ಕೆಂದೇ 'ಕೆನರಾ ಹೆಮ್ಮಕ್ಕಳ ಶಾಲೆ' ಆರಂಭಿಸಿದರು.

* ಸ್ತ್ರೀ ಶಿಕ್ಷಣದ ಪ್ರಯತ್ನಗಳು ವಸಾಹತು ಕಾಲದಿಂದ ನಡೆಯುತ್ತಾ ಬಂದಿದ್ದರೂ ನಿರೀಕ್ಷಿತ ಫಲ ಸಾಧನೆ ಆಗಿಲ್ಲ. ಸ್ತ್ರೀ ಪುರುಷರ ನಡುವೆ ಶಿಕ್ಷಣದಲ್ಲಿ ಅಸಮಾನತೆ ಇಂದಿಗೂ ಉಳಿದಿರುವುದು ದುಃಖದ ಸಂಗತಿಯಾಗಿರುವುದನ್ನು ಗಮನಿಸಬಹುದು.

ಪ್ರತಿಶತ ಸಂಖ್ಯೆಯಲ್ಲಿ ಮಹಿಳಾ ಅಕ್ಷರಸ್ಥರ ಸಂಖ್ಯೆ ಪುರುಷರಿಗಿಂತ ಗಣನೀಯವಾಗಿ ಕಡಿಮೆ ಇದ್ದು, ಮಹಿಳಾ ಶಿಕ್ಷಣಕ್ಕೆ ತೊಡಕಾಗಿರುವ ಅಂಶಗಳನ್ನು ಗಮನಿಸಿದಾಗ ನಮ್ಮಲ್ಲಿರುವ ಲಿಂಗಭೇದ ನೀತಿ ಹಾಗೂ ಮಹಿಳಾ ಬದುಕಿನ ಇಕ್ಕಟ್ಟುಗಳು ಧರ್ಮದ ಸಮಸ್ಯೆಯೇ ಮುಖ್ಯವಾದವು.

ಕುಟುಂಬದ ದಿನನಿತ್ಯದ ಅಗತ್ಯಗಳನ್ನು ಪೂರೈಸುವಲ್ಲಿ ಆಕೆಗೆ, ವಿದ್ಯಾಭ್ಯಾಸಕ್ಕೆ ಬಿಡುವು ಸಿಗುವುದೇ ದುಸ್ತರವಾಗಿದೆ. ಹೆಣ್ಣು ಮದುವೆ, ತಾಯ್ತನ, ಅನಾರೋಗ್ಯಗಳಿಂದ ಬಳಲುತ್ತಾ ಬದುಕನ್ನು ಸವೆಸುತ್ತಿರುವುದನ್ನು ಕಾಣಬಹುದಾಗಿದೆ.

* ವಸಾಹತುಶಾಹಿ ಕಾಲಘಟ್ಟದಲ್ಲಿ ಕರ್ನಾಟಕದ ಕರಾವಳಿಯಲ್ಲಿ ಶಾಲೆಗೆ ಹಾಜರಾಗುತ್ತಿದ್ದ ಹೆಣ್ಣು ಮಕ್ಕಳ ಸಂಖ್ಯೆ ತೀರಾ ವಿರಳವಾಗಿತ್ತು.

* ಬಾಸೆಲ್ ಮಿಷನ್ ಲಿಂಗ, ಜಾತಿ, ಧರ್ಮದ ಬೇಧವಿಲ್ಲದೇ ಸಮಾನ ಶಿಕ್ಷಣ ಎಲ್ಲಾ ಹೆಣ್ಣು ಮಕ್ಕಳಿಗೆ ಸಿಗಬೇಕು ಎಂಬ ಗುರಿಯಿಂದ ಮನೆಗಳಲ್ಲಿಯೇ ವ್ಯಾಸಂಗ ಮಾಡುವ ವ್ಯವಸ್ಥೆ ಮತ್ತು ಶಾಲೆಗೆ ಬರುವಂತೆ ಸೆಳೆಯಲು ಕಸೂತಿಯನ್ನು ಆರಂಭಿಸಲಾಯಿತು. ಪತ್ನಿಯನ್ನು ಶಾಲೆಗೆ ಕಳುಹಿಸಿಕೊಡಲು ಮೇಲ್ವರ್ಗದ ಪುರುಷರು ಒಪ್ಪಿಕೊಂಡಿರುವುದು ಕಾಣಬಹುದಾಗಿದೆ.

* 1911 ರ ಕಾಲದಲ್ಲಿ ಕೆಲವು ಮಹಿಳೆಯರು ಪ್ರೇರಣೆಗೊಂಡು ಮಹಿಳಾ ಸಂಘಟನೆಯೊಂದರ ಅವಶ್ಯಕತೆಯ ಬಗ್ಗೆ ಅರಿತುಕೊಂಡು ಸಂಘಟನೆಯ ಮೂಲಕ ಮಂಗಳೂರು ಪ್ರದೇಶದ ವಿವಿಧ ವರ್ಗಗಳ ಮಹಿಳೆಯರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಯಿತು.

* 1911 ರ ಮೇ ತಿಂಗಳಲ್ಲಿ ಮಹಿಳಾ ಸಭಾ ಅಸ್ತಿತ್ವಕ್ಕೆ ಬಂದು, ಧಾರೇಶ್ವರ್ ಗಿರಿಜಾಬಾಯಿ ಅಧ್ಯಕ್ಷೆಯಾಗಿ ಆಯ್ಕೆಗೊಂದು ಕಾರ್ನಾಡ್ ಶಾಂತಿಬಾಯಿ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿರುವುದನ್ನು ಗಮನಿಸಬಹುದು. ಇದು ಇಂಗ್ಲೀಷ್ , ಸಂಗೀತ, ಕಸೂತಿ ಕಲಿಸುವ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿತು.

* ವಸಾಹತುಶಾಹಿ ಕಾಲದ ಮಹಿಳೆಯರ ಸ್ಥಾನಮಾನದಲ್ಲಿ ಬ್ರಿಟಿಷರ ಆಗಮನದಿಂದಾಗಿ, ಸ್ತ್ರೀ ಪುರುಷರ ನಡುವೆ ಸಮಾನತಾ ಮನೋಭಾವ, ದ್ವಿಮುಖ ನೈತಿಕ ನಿಯಮಗಳ ಶಿಥಿಲತೆ, ಸ್ತ್ರೀಯರ ಶೋಷಣೆಗಳು ನಿರ್ಮೂಲನೆಯಾಗಿ ಮಹಿಳೆಯರು

ಉದ್ಯೋಗಿಗಳಾಗಿ ಆರ್ಥಿಕ ಸ್ವಾವಲಂಬಿಗಳಾಗುವ ಅವಕಾಶವನ್ನು ಪಡೆಯುವುದರ ಜೊತೆಗೆ ಸಾರ್ವಜನಿಕ ಚಟುವಟಿಕೆಗಳು ತಮ್ಮನ್ನು ತೊಡಗಿಸಿಕೊಂಡರು.

ಮಹಿಳೆಯರಿಗಾಗಿ ಸಂವಿಧಾನದ 14 ನೇ ವಿಧಿ ಸ್ತ್ರೀ ಪುರುಷರಿಗೆ ಸಮಾನವಾದ ಹಕ್ಕುಗಳನ್ನು 15 ನೇ ವಿಧಿ ಲಿಂಗತಾರತಮ್ಯ ನಿಷೇಧ, 16 ನೇ ವಿಧಿ ಉದ್ಯೋಗ ಕ್ಷೇತ್ರದಲ್ಲಿ ಸ್ತ್ರೀ ಪುರುಷರಿಗೆ ಸಮಾನ ಅವಕಾಶವನ್ನು ಕಲ್ಪಿಸಿರುವುದನ್ನು ಗಮನಿಸಬಹುದು.

* ಹೆಣ್ಣುಮಕ್ಕಳ ಶಿಕ್ಷಣ ವಿಷಯದಲ್ಲಿ ದಕ್ಷಿಣ ಕನ್ನಡಕ್ಕೆ ಅಗ್ರಸ್ಥಾನವಿರುವುದನ್ನು ತಿಳಿಯಬಹುದು.
* ದೇಶದ ಆರಂಭದ ಮಹಿಳಾ ಕಾಲೇಜುಗಳಲ್ಲಿ ದಕ್ಷಿಣ ಕನ್ನಡದ ಸೈಂಟ್ ಆಗ್ನೆಸ್ ಕಾಲೇಜು ಒಂದಾಗಿದೆ.
* ಮಾತೃ ಪ್ರಧಾನ ವ್ಯವಸ್ಥೆಯು ಸಮಾಜದಲ್ಲಿ ಮುಂದುವರೆಯುತ್ತಿರುವುದನ್ನು ಈ ಸಂಶೋಧನೆಯಿಂದ ತಿಳಿಯಬಹುದಾಗಿದೆ. ಮಹಿಳೆಯರೇ ಉತ್ತಮ ಸ್ಥಾನದಲ್ಲಿದ್ದು 1956 ರಲ್ಲಿ ಹಿಂದೂ ಉತ್ತರಾಧಿಕಾರ ಕಾಯಿದೆ 1959 ರ ಮದ್ರಾಸ್ ಸರ್ಕಾರ ತಿದ್ದುಪಡಿ ತಂದರೂ ಮಾತೃ ಪ್ರಧಾನ ವ್ಯವಸ್ಥೆಯು ಚಾಲ್ತಿಯಲ್ಲಿರುವುದು ಗಮನಾರ್ಹ ವಿಷಯವಾಗಿದೆ.

ಆಕರ ಗ್ರಂಥಗಳು

1. ಎ.ವಿ. ನಾವಡ (ಸಂ), 1985 ದ.ಕ. ಜಿಲ್ಲಾ, ನೇತ್ರಾವತಿ (ಸ್ಮರಣಸಂಚಿಕೆ) ದ.ಕ.ಜಿಲ್ಲಾ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಂಗಳೂರು.
2. ರತ್ನ ಮಂಜುಷಾ, ಅಖಿಲ ಭಾರತ 51ನೇ ಕನ್ನಡ ಸಾಹಿತ್ಯ ಸಮ್ಮೇಳನ 1979 ಧರ್ಮಸ್ಥಳ.
3. ಶೈಣ್ಯೆ, ಬಸ್ತಿ ಪುಂಡಲೀಕ ವೆಂಕಟೇಶ, ಕೊಂಕಣಿ ಮತ್ತು ಮರಾಠಿ ಇವುಗಳ ತುಲನಾತ್ಮಕ ವಿಮರ್ಶೆ ಮತ್ತು ಸಾರಸ್ವತ ಬ್ರಾಹ್ಮಣರ ಪ್ರಾಚೀನ ಇತಿಹಾಸ, ಮಂಗಳೂರು ಶ್ರೀ ಲಲಿತಾ ಪ್ರಾಚ್ಯ ಸಂಶೋಧನಾಲಯ, ಶಕ 1990.
4. ಹಿರಿಯಡಕ, ಮುರುಳೀಧರ ಉಪಾಧ್ಯ (ಸಂ) ಕೊಂಕಣಿ ಭಾಷಾ ಸಾಹಿತ್ಯ, ಉಡುಪಿ ಕೊಂಕಣಿ ಅಧ್ಯಯನ ಪೀಠ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ 1995.
5. ಕಡವ ಶಂಭು ಶರ್ಮ, ತುಳು ದೇಶ ಭಾಷಾ ವಿಚಾರವು ಪುಟ 1970
6. ಐ. ಮಾ ಮುತ್ತಣ್ಣ, 19 ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ 1969.
7. ಪಾದೇಕಲ್ಲು ವಿಷ್ಣುಭಟ್ಟ, ತುಳುವರಿವರು, ರಾಷ್ಟ್ರಕವಿ ಗೋವಿಂದ ಪೈ, ಉಡುಪಿ
8. ಪಾಡ್ದನೋಳು, A manner, B.M. Press Mangalore, 1886.
9. ಪ್ರೊ. ಅಮೃತ ಸೋಮೇಶ್ವರ, ತುಳುವರಿವರು, 19 ನೇ ಶತಮಾನದಲ್ಲಿ ತುಳು ಸಾಹಿತ್ಯಕ್ಕೆ ಮಿಶನರಿಗಳ ಕೊಡುಗೆ.
10. ಶ್ರೀನಿವಾಸ ಹಾವನೂರ, ತುಳುವಿನಲ್ಲಿ ಪ್ರಾಥಮಿಕ ಶಿಕ್ಷಣ, ಸಿರಿ.
11. ತುಳುವರಿವರು, ಯು.ಪಿ. ಉಪಾಧ್ಯಾಯರ ಲೇಖನ, ತುಳುವಿನಲ್ಲಿ ಮೊದಲ ವೈಯಾಕರಣ

12. ತೌಳವ ಸಂಸ್ಕೃತಿ, ಬಿ.ಎ. ವಿವೇಕ ರೈ, ಸಹ್ಯಾದ್ರಿ ಪ್ರಕಾಶನ, ಮೈಸೂರು 1977
13. ಕಡವ ಶಂಭು ಶರ್ಮ, ತುಳು ದೇಶ ಭಾಷಾ ವಿಚಾರ, 1970
14. ಕೆ. ಚಿನ್ನಪ್ಪಗೌಡ, ಪನಿಯಾರ, (ನೆಂಪು ಸಂಚಿಕೆ – ಅಖಿಲ ಭಾರತ ತುಳು ಸಮ್ಮೇಳನ, ಮಂಗಳೂರು 1989
15. ಮುರುಳೀಧರ, ಉಪಾಧ್ಯ ಹಿರಿಯಡಕ, ತುಳು ಕಾವ್ಯ – ಕಬಿತೆ ಸಂಕಲನೊಳು
16. ಗಂಗಾಧರ ಕಿದಿಯೂರು, ವಿಜಯಲಕ್ಷ್ಮಿ (ತುಳು ಸಾಮಾಜಿಕ ನಾಟಕ) ಮಧುಶ್ರೀ ಪ್ರಕಾಶನ, ಕಿದಿಯೂರು, ಉಡುಪಿ 1987.
17. ಮುರುಳೀಧರ ಹಿರಿಯಡಕ, ಆಕಾಶವಾಣಿ, ಮಂಗಳೂರು, ಪುಸ್ತಕ ಸಮೀಕ್ಷೆ, 1997 ಪದರಂಗಿತ, ಬಾನೊ ತೋರೊಂದುಂಡು.
18. ಸುನೀತಾ ಎಂ. ಶೆಟ್ಟಿ (ಡಾ) ನಾಗಸಂಪಿಗೆ ಅಕ್ಷಯ ಪ್ರಕಾಶನ, ಸರ್ವೋದಯ ಸೊಸೈಟಿ, ಕುರ್ಲಾ, ಮುಂಬಯಿ 1994.
19. ವಿವೇಕ ರೈ ಬಿ.ಎ., ತುಳು ಒಗಟುಗಳು, ಕನ್ನಡ ಸಂಘ, ಮಂಗಳಗಂಗೋತ್ರಿ 1971
20. ವಿವೇಕ ರೈ, ಬಿ.ಎ., ತುಳು ಗಾದೆಗಳು, ಪಲಚಂಪಿ ಪ್ರಕಾಶನ, ಮಂಗಳೂರು ದ.ಕ. 1971
21. ವಿವೇಕ ರೈ. ಬಿ.ಎ. ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1985
22. ಡಾ. ವಾಮನ ನಂದಾವರ, ಓಲೆ ಪಟಾಕೆ, ತುಳು ಕನ್ನಡಾ ಸ್ವತಂತ್ರ ಒಗಟುಗಳು, ಭಾರಧ್ವಾಜ ಪ್ರಕಾಶನ, ಕದಿರೆ, ಮಂಗಳೂರು, 1980
23. ಲೀಲಾವತಿ ಕೆ. ತಿಬಿಲೆ (ತುಳು ಕಬಿತೆಗಳು), ರತ್ನತ್ರಯ ಪ್ರಕಾಶನ, ಬಿಜೈ, ನ್ಯೂ ರೋಡ್, ಮಂಗಳೂರು 1994
24. ವೈ ಉಮನಾಥ ಶೆಣೈ, ಕನ್ನಡ ಸಾಹಿತ್ಯಕ್ಕೆ ಮೂಡಬಿದ್ರೆಯ ಕೊಡುಗೆ, ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ 1988
25. ಅರವಿಂದ ಮಾಲಗತ್ತಿ, ಉತ್ತರ ಕರ್ನಾಟಕದ ಜನಪದ ಆಟಗಳು, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪದವಿ ಪಡೆದ (ಅಪ್ರಕಟಿತ) ಪ್ರೌಢ ಪ್ರಬಂಧ
26. ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ, ಮಂಗಳ ಗಂಗೋತ್ರಿ, 1990
27. ಗಣನಾಥ ಎಕ್ಕಾರು, ತುಳುನಾಡಿನ ಜನಪದ ಆಟಗಳು, ಮಂಗಳೂರು ವಿಶ್ವವಿಧ್ಯಾನಿಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಪ್ರೌಢ ಪ್ರಬಂಧ (ಅಪ್ರಕಟಿತ)
28. ವಿವೇಕ ರೈ ಬಿ.ಎ., ಜನಪದ ಆಟಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, 1990 ಬೆಂಗಳೂರು
29. ಡಾ. ಕೆ. ಚಿನ್ನಪ್ಪ ಗೌಡ, ಭೂತರಾಧನೆ, ಜಾನಪದೀಯ ಅಧ್ಯಯನ, ಮದಿಪು, ಪ್ರಕಾಶನ 1990 ಮಂಗಳೂರು
30. ಅಮೃತ ಸೋಮೇಶ್ವರ, ತುಳು ಬದುಕು, ಪ್ರಕೃತಿ ಪ್ರಕಾಶನ 1984 ಕೋಟೆಕಾರು
31. ಅಭಯ ಕುಮಾರ್ ಕೆ. ಮುಗೇರರು, ಜನಾಂಗ ಜಾನಪದ ಅಧ್ಯಯನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ 1997
32. ಚಿನ್ನಪ್ಪ ಗೌಡ ಕೆ. ಭೂತರಾಧನೆ ಕೆಲವು ಅಧ್ಯಯನಗಳು, ತುಳುವ ಪ್ರಕಾಶನ 1993 ಮಂಗಳೂರು
33. ರಾಜಗೋಪಾಲ ಕ.ವೆಂ., ತುಳುವರ ಆಚರಣೆಗಳಲ್ಲಿ ಕಲಾವಂತಿಕೆ, ಕರ್ನಾಟಕ ಲಲಿತಾ ಕಲಾ ಅಕಾಡೆಮಿ, 1989 ಬೆಂಗಳೂರು
34. ವಿವೇಕ ರೈ ಬಿ.ಎ., ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, 1985 ಬೆಂಗಳೂರು
35. ರೇ ಮ್ಯಾನರ್ – ಪಾಡ್ದನಲು (ತುಳು) ಬಾಸೆಲ್ ಮಿಷನ್ 1898
36. ಡಾ. ರಮೇಶ ಕೆ.ವಿ., ದಕ್ಷಿಣಕನ್ನಡ ಜಿಲ್ಲೆಯ ಇತಿಹಾಸ, 1970 ಧಾರವಾಡ
37. ಬಿ. ಎ. ಸಾಲೆತ್ತೂರು, ಎನ್ ಸಿಟಿಯಂಟ್ ಕರ್ನಾಟಕ (ಇಂಗ್ಲೀಷ್) ಭಾಗ -1, 1935 ಮುಂಬಯಿ

38. ಶರವು ರಾಮಕೃಷ್ಣ ಶಾಸ್ತ್ರಿ, ಸ್ಥಳ ಪುರಾಣ, ಶರವು ಮಹಾಗಣಪತಿ ದೇವಸ್ಥಾನ, ಮಂಗಳೂರು 1962
39. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಮರಗಳು ಭಾಗ-1, 1974 ಮೈಸೂರು
40. ಜಿ. ಎಸ್. ದೀಕ್ಷಿತ್, ಕೃಷ್ಣ ದೇವರಾಯನ ಇತಿಹಾಸಕ್ಕೆ ಒಂದು ಆಕರ, ವಿಜಯನಗರ ಅಧ್ಯಯನ ಸಂಪುಟ, 1996 ಪರ್ವ 85-87
41. ನಾಗೇಗೌಡ ಎಚ್.ಎಲ್. "ಪ್ರವಾಸಿ ಕಂಡ ದಕ್ಷಿಣ ಕನ್ನಡ" ಸುದರ್ಶನ
42. ಡಿ.ಎಂ. ನಾಗರಾಜು "ದಕ್ಷಿಣ ಕನ್ನಡ ಜಿಲ್ಲೆಯ ವಿಜಯನಗರ ಜೈನ ಶಾಸನಗಳು', ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
43. ಆರ್. ಗೋಪಾಲ್ (ಸಂ.) ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಮೈಸೂರು, 2007
44. ಗೋಪಾಲಕೃಷ್ಣ ಸಾಮಗ, 'ತುಳುನಾಡಿನಲ್ಲಿ ಕೆಳದಿ ವೀರಶೈವ ಅರಸರು ಮತ್ತು ಧರ್ಮ ಸಹಿಷ್ಣುತೆ, ಇತಿಹಾಸ ದರ್ಶನ 2002
45. ಕೆಳದಿ ವೆಂಕಟೇಶ್ ಜೋಯಿಸ್, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಳದಿ ಅರಸರ ಆಳ್ವಿಕೆ ಮತ್ತು ಆಕರಗಳು ಅವುಗಳ ಸಂರಕ್ಷಣೆ, ದಕ್ಷಿಣ ಕನ್ನಡ ಜಿಲ್ಲೆಯ ಪುರಾತತ್ವ.
46. ಕೆಳದಿ ಗುಂಡಾ ಜೋಯಿಸ್, 'ಕೆಳದಿ ಇತಿಹಾಸದಲ್ಲಿ ಮಂಗಳೂರು' ಸಾಧನೆ, ಬೆಂಗಳೂರು ವಿಶ್ವ ವಿದ್ಯಾನಿಲಯ.
47. ಎಕ್ಸ್ ಟ್ರಾಕ್ಟ್ಸ್ ಫ್ರಮ್ ದ ಡೈರಿ ಆಫ್ ದ ಸಿವಿಲ್ ಎಂಜಿನಿಯರ್, ಸೆವೆನ್ತ್ ಡಿವಿಜನ್ ಡೇಟೆಡ್ 9-1- 1844 ಕಲೆಕ್ಟೋರೇಟ್ ರೆಕಾರ್ಡ್ಸ್ ಸೌತ್ ಕೆನರಾ ಎಸ್. ನಂ. 5218

Secondary Sources

1. M.R.T. Pal work of the mission, CSI, KSD, Souvenir, 1991
2. A Journey from Madras through the countries of Mysore, Canara and Malabar, Vol. III, Francis Buchanan, London, Asiatic Society.
3. A.C. Burnell, Elements of South Indian Paleography, London: Trubnur & Co., 1870.
4. J. Sturrock, Madras District Manuals: South Canara, Vol.I compiled, Madras: Government Press, 1894.
5. Edmund Leach, Levistracess (Ed) Frank Kermode, Wallian Collian and Co.Ltd., Glasgow, 1979
6. John Sturrock, Structurlism, Paloclin Grafton Books, 1986.
7. Padmanabha P., Special Study report on Bhuta Cult. in South Canara District, Census of India, Mysore series 14, 1971, Director of Census Operations, Mysore.
8. Upadhyaya U P, Susheela P. Upadhyaya, Bhuta Worship, Aspects of A, Ritualistic Theatre RRC, 1984, Udupi.
9. Upadhyaya U.P., Folk Epics of Tulunadu Folk regional Resources Centre for Folk Performing Arets, 1986, Udupi.

10. P. Gururaj Bhat, Studies in Tuluva History and Culturre.
11. Mileay, Canara Fast and Present, 1875, Mangalore.
12. Madras Govt. Records – Fort St. George.
13. Dr. Vasanth Madhav, Religion in Coastal Karnataka, 1985, New Delhi
14. Cunha Rivera, Archivo Portuguese Oriental, Vol. IV quoted by A.K. Priolkar, The Goa inquisition, 1961, Bombay.
15. Pius Fideles Pinto, History of Christianity in Vijayanagara and Nayaks of Keradi (1500-1763 A.D.) unpublished thesis, 1998 Mysore.
16. J. Sturrock, Madras District Manuals, South Canara, Madras, Vol. 1, 1801.
17. Rt. Rev. S.R. Furtado, The contribution of Basel Evangelical Missionary Society in India, Vidyanidhi Souvenir in commemoration of B.E. High School, 1998, Mangalore.
18. Prabhakar Peter Wilson, The Basel Mission in South Canara, 1834-1947, Unpublished thesis, 1988, Mangalore.
19. K. Jaiprakash Raghaviah, Basel Mission Industries in Malbar and South Canara 1834-1914, 1990, New Delhi.
20. Epigraphia Carnatica (old Ed) VIII Sagar Nos. 55, 1163, Karnataka Inscription Vol.1.
21. K.G. Vasantha Madhava, The Dutch in Coastal Karnataka, QJMS, 1982
22. N. Shyam Bhat, South Canara (1799-1860) A study in Colonial Administration and Regional Response, 1998, New Delhi.
23. B. Surendra Rao, South Canara in the 19th century Mangalore University Decennial volume, 1891, Mangalore.
24. J. Sturrock, Madras District Manuals, South Canara Vol-1, 1894, Madras,
25. Harold A, Stuart, Madras District Manuals, South Canara, Vol.11, 1895, Madras.
26. Edward Thornton, A Gazetteer of the under the Government of East India Company and of the native states on the continent of India, 1858 New delhi.

27. Dr. Francis Buchanan, A journey from madras through the countries of mysore, canara and Malabar.
28. T.W. Vasu, Mangalore in Early victorian days, 1945.
29. B.A. Salethur, Ancient Karnataka, Vol.1 of History of Tuluva, Puna 1936.
30. B. Surendra Rao, "Images of trade and traders in tulu folklore", studies peoples history, June 2015, New Delhi
31. Vasanth Madhava Ker, Western Karnataka Its Agrarian Relations, 1500-1800 Navaranga, New Delhi, 1991
32. Sharma M.J, Dharmasthala Plates of Chalukya Vinayaditya Jr. of Epi, soc. of India, XX1 1995.
33. K.G. Vasanth Madhav, Western Karnataka: Its Agrerian relations, Navarang 1991.
34. Sibanthi Padmanabha K.V., Basel Mission Works go digital, Decan Herald, 2.2.2008.

ಗಜೆಟಿಯರ್ಸ್

1. ಕರ್ನಾಟಕ ಗೆಜೆಟಿಯರ್, ದಕ್ಷಿಣ ಕನ್ನಡ 1973
2. ಎಸ್. ಅನಿಸ್ ನಿರಾಜ್, ದಕ್ಷಿಣ ಕನ್ನಡ ಗೆಜೆಟಿಯರ್, ನ್ಯೂ ಎಡಿಷನ್ 2000
3. ಜೆ.ಎಫ್. ಹಾಲ್, ಮದ್ರಾಸ್ ಡಿಸ್ಟ್ರಿಕ್ಟ್ ಗೆಜೆಟಿಯರ್, ಮದ್ರಾಸ್ 1938

Thesis

A Comparative study of Tulu Dialects

1. Dr. K. Padmanabha Kekunnaya 1994, Rashtrakavi Govinda Pai, Samshodhana Kendra, Udupi – 2.

2. Rita Noronha "In analytical perspective situation of women in Dakshina Kannada.

3. Namrutha Suvarna, "A critical view of the situation of women in different communities of Dakshina Kannada.

4. Jovina Madtha, “A Critical Study of Selected Women in the Dalit Community in Dakshina Kannada District”.

5. Shubha T., “The situation of selected women of the Bunt Community in Dakshina Kannada District”.

6. P.C. Renukamba, “Women Economic Development in Karnataka”, a case study of Karnataka State Women Development Corporation.

7. Moolty Malathi, “Trade and Commerce in Colonial South Canara” 1991, Mangalore University.

(ಡಾ. ಮೀನಾಕ್ಷಿ ಎಮ್. ಎಮ್.)
ಸಹಪ್ರಾಧ್ಯಾಪಕರು (ನಿವೃತ್ತ)
ವಿಶ್ವವಿದ್ಯಾನಿಲಯ ಕಾಲೇಜು,
ಹಂಪನಕಟ್ಟೆ, ಮಂಗಳೂರು,

(ಪ್ರಮೀಳಾ ಎಂ.)
ಸಂಶೋಧನಾ ವಿದ್ಯಾರ್ಥಿ